ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ–ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
★ ಪ್ರೀತಿ ನಮ್ಮ ಸ್ವಭಾವ.
★ ಮೌನ ನಮ್ಮ ಭಾಷೆ.
★ ಧ್ಯಾನ ನಮ್ಮ ಮಾರ್ಗ.
★ ಈ ಪ್ರಪಂಚ ನಮ್ಮ ಆಶ್ರಮ.
★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
★ ದೇವರು ನಮ್ಮ ಗುರು ;
ಋಷಿಗಳು ನಮ್ಮ ಮಾರ್ಗದರ್ಶಿಗಳು

# ತಪೋವಾಣಿ

ಸಂಪುಟ 18 ಸಂಚಿಕೆ 03 ಮಾರ್ಚ್ 2021 ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪಾ**

**(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಜುಲೈ 2001ರ ಸಂಚಿಕೆ)**

ಮಳೆಗಾಲ ಶುರುವಾಗಿದೆ; ಬೇಸಗೆ ತಣ್ಣಗೆ ಹಿಂದಕ್ಕೆ ಸರಿದಿದೆ. ಒಂದು ಋತು ಮೌನವಾಗಿ ಮತ್ತೊಂದು ಋತುವಿಗೆ ಅವಕಾಶ ಮಾಡಿಕೊಟ್ಟಿದೆ. ಇಲ್ಲಿ ಯಾವುದೇ ಘರ್ಷಣೆಯಿಲ್ಲ; ಯಾವುದೇ ಪ್ರತಿರೋಧವಿಲ್ಲ. ಪ್ರಕೃತಿಗೆ ಯಾವುದೇ ದುರಭಿಮಾನದ ಪ್ರಾಬಲ್ಯಗಳಿರುವುದಿಲ್ಲ. ಪ್ರಕೃತಿಯಲ್ಲಿ ಎಷ್ಟೊಂದು ವಿವೇಚನೆ ಮತ್ತು ಭ್ರಾತೃತ್ವವಿದೆ

ನಾನು ದರ್ಶನದ ಬಗ್ಗೆ ಮಾತನಾಡಿದಾಗಲೆಲ್ಲ ಜನರು ನನ್ನನ್ನು ಶೂನ್ಯ ದೃಷ್ಟಿಯಿಂದ ದಿಟ್ಟಿಸುತ್ತಾರೆ, ನನ್ನ ಕಲ್ಪನೆಯು ದಾಪುಗಾಲು ಹಾಕಿದಾಗಲೆಲ್ಲ ನನ್ನ ದಾರಿಗೆ ಅಡ್ಡ ಬರುತ್ತಾರೆ. ನಾನು ಸತ್ಯದ ರತ್ನಗಳನ್ನು ಮುಂದೆ ಇರಿಸಿದಾಗ, ಜನರು, ತಾವು ಬಹಳ ಸರಳ ವ್ಯಕ್ತಿಗಳು ಎಂದು ಹೇಳುತ್ತಾರೆ. ನಾನು ಒಂದು ಅನುಭವವನ್ನು ಹೇಳಿಕೊಂಡಾಗಲೆಲ್ಲ, ಜನರು ಅದನ್ನು ವಿಶ್ಲೇಷಿಸಲು ಪ್ರಯತ್ನಿಸುತ್ತಾರೆ ಹಾಗೂ ಪ್ರತಿಯೊಂದರ ಮಹತ್ವವನ್ನು ಕೇಳುತ್ತಾರೆ. ನಾನು ಮ್ಯೂಸಿಕ್ ಸಿಸ್ಟಮ್ ಅನ್ನು ಹಾಕಿದಾಗಲೆಲ್ಲ, ಜನರು ಚರ್ಚೆಗೆ ತೊಡಗುತ್ತಾರೆ. ನಾನು ಕಲೆಯನ್ನು ಹೊರತಂದಾಗ, ಜನರು ಹಣದ ಖಾತೆಯನ್ನು ಬರೆಯುತ್ತಾರೆ. ಹೇಳಲಾಗದ ಭಾವನೆಯಿಂದ ನನ್ನ ಗಂಟಲು ಕಟ್ಟಿದಾಗಲೆಲ್ಲ, ನನ್ನ ಮೇಲೆ ಆಹಾರದ ರಾಶಿಯನ್ನು ಹೇರಲಾಗುತ್ತದೆ. ನಾನು ಏಕಾಂತದಲ್ಲಿರಬಯಸಿದಾಗಲೆಲ್ಲ, ಜನರು ಗುಂಪು ಗುಂಪಾಗಿ ಬಂದು ನನ್ನೊಂದಿಗೆ ಮಾತನಾಡಲು ಬಾಗಿಲು ಬಡಿಯುತ್ತಾರೆ.

ಆದರೆ ನಾನು ನನ್ನಲ್ಲೂ, ಅವರಲ್ಲೂ ಬೆಳಕನ್ನು ಕಂಡಾಗ, ಅವರೆಲ್ಲರೂ ಏಕ ಪ್ರಭೆಯಾಗಿ ಹೊಳೆಯುತ್ತಾರೆ. ನನಗೆ ಅವರನ್ನು ಪ್ರೀತಿಸಲು ಮಾತ್ರ ಸಾಧ್ಯ. ಅವರೇ ನಾನು; ನನ್ನ ಆತ್ಮ.

ಒಬ್ಬ ವಿದ್ಯಾರ್ಥಿ ತನ್ನ ಗುರುವನ್ನು ಆಯ್ದುಕೊಳ್ಳಲು ಸಾಧ್ಯವೆ? ಹೌದು ಸಾಧ್ಯ, ಗುರುವೂ ತನ್ನ ಶಿಷ್ಯಂದಿರನ್ನು ಆಯ್ದುಕೊಳ್ಳಲು ಸಾಧ್ಯ!

ಒಬ್ಬ ಗುರು ತನ್ನ ಶಿಷ್ಯನ ಯೋಗ್ಯತೆಯನ್ನು ನಿರ್ಣಯಿಸಬಹುದು. ಆದರೆ ಒಬ್ಬ ಶಿಷ್ಯ ತನ್ನ ಗುರುವಿನ ಯೋಗ್ಯತೆಯನ್ನು ನಿರ್ಣಯಿಸಲಾರ, ಏಕೆಂದರೆ, ಅವನಿನ್ನೂ ಕಲಿಯಬೇಕು, ಕಲಿತು ಬೆಳೆಯಬೇಕು. ಅವನು ತನ್ನ ಗುರುವಿನ ಯೋಗ್ಯತೆಯನ್ನು ನಿರ್ಣಯಿಸಲು ಪ್ರಯತ್ನಿಸಿದರೆ, ನಾನು ಅದನ್ನು ಅಜ್ಞಾನದ ಜೊತೆಗೂಡಿದ ಅಹಂಕಾರ ಎಂದು ಕರೆಯುತ್ತೇನೆ.

ನಮ್ರತೆಯಿಲ್ಲದೆ ಆಧ್ಯಾತ್ಮಿಕ ಪಾಠಗಳನ್ನು ಕಲಿಯಲು ಸಾಧ್ಯವಿಲ್ಲ. ಶರಣಾದಾಗ ಮಾತ್ರ ನಾವು ಏನನ್ನಾದರೂ ಪಡೆದುಕೊಳ್ಳಲು ಸಾಧ್ಯ. ಶರಣಾಗಬೇಕಾದರೆ ನಾವು ಪ್ರೇಮವನ್ನು ಹೊರತರಬೇಕಾಗುತ್ತದೆ. ಪ್ರೇಮ; ದಿವ್ಯ ಪ್ರೇಮ. ನಾನು ಈ ದಿವ್ಯ ಪ್ರೇಮದ ಬಗ್ಗೆ ಮೊದಲಿನಿಂದಲೂ ಮಾತನಾಡುತ್ತ ಬಂದಿದ್ದೇನೆ ಹಾಗೂ ಸಾವಿರಾರು ಧ್ಯಾನಿಗಳು ಈ ಪ್ರೇಮಕ್ಕೆ ತಮ್ಮ ಹೃದಯವನ್ನು ತೆರೆದಿಟ್ಟಿದ್ದಾರೆ. ಯಾರಾದರೂ ತಮ್ಮ ಹೃದಯವನ್ನು ತೆರೆಯಲು ಹೆಣಗಾಡಿದಾಗ, “ನಾನು ಕಲಿಸಿದ ಮತ್ತು ಹರಿಸಿದ ಪ್ರೀತಿ ಏನಾಯಿತು?” ಎಂದು ಅಚ್ಚರಿಪಡುತ್ತೇನೆ. ನಾನು ದುಃಖಿಸುತ್ತೇನೆ, ಪ್ರಾರ್ಥಿಸುತ್ತೇನೆ. ಕಾಯುತ್ತೇನೆ!

ನಾವು ತಪೋನಗರದಲ್ಲಿ, ಋಷಿಗಳ ಈ ಮಾರ್ಗದಲ್ಲಿ ಪವಾಡಗಳನ್ನು ನೋಡಿದ್ದೇವೆ. ನಮಗೆ ಸದಾ ರೋಮಾಂಚನ ಹಾಗೂ ಆನಂದದ ಅನುಭವವಾಗಿದೆ. ಆದರೆ ನಾವು ಅಲ್ಲಿಗೇ ನಿಲ್ಲಲಿಲ್ಲ. ಪವಾಡಗಳು, ಅವುಗಳ ಹಿಂದಿರುವ ಬೆಳಕನ್ನು ನೋಡಲು ಹಾಗೂ ಅದನ್ನು ಅರಿಯಲು ಪ್ರಾರಂಭಿಕ ವಿಷಯಗಳಷ್ಟೆ. ಪವಾಡಗಳೆಂದರೆ ಮೈಲಿಗಲ್ಲುಗಳಷ್ಟೇ ಹೊರತು ಗಮ್ಯಸ್ಥಾನವಲ್ಲ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ–ಮೇಲ್: info@lightagemasters.com ವೆಬ್‌ಸೈಟ್: www.lightagemasters.com

# ಧ್ಯಾನದ ತರಗತಿಗಳು

ಬೆಂಗಳೂರು ನಗರದ ಎಲ್ಲಾ ಕೇಂದ್ರಗಳಲ್ಲಿನ ಧ್ಯಾನದ ತರಗತಿಗಳನ್ನು ರದ್ದುಗೊಳಿಸಲಾಗಿದೆ. ಕೋವಿಡ್ ಹರಡುವಿಕೆ ಹಾಗೂ ಅದರ ಲಸಿಕೆ ಅಥವಾ ಔಷಧಿ ಲಭ್ಯವಾಗಲು ಬೇಕಾಗಬಹುದಾದ ಸಮಯವನ್ನು ಗಮನದಲ್ಲಿರಿಸಿಕೊಂಡು, ಬೆಂಗಳೂರು ನಗರದ ಕೇಂದ್ರಗಳಲ್ಲಿನ ತರಗತಿಗಳನ್ನು ಮಾರ್ಚ್ 2021ನೇ ಇಸವಿಯವರೆಗೆ ನಡೆಸಲಾಗುವುದಿಲ್ಲ ಎಂದು ನಿರ್ಧರಿಸಲಾಗಿದೆ. ಏಪ್ರಿಲ್ 2021 ರಿಂದ, ಅಂದಿನ ಪರಿಸ್ಥಿತಿಯನ್ನು ಅವಲೋಕಿಸಿ, ತರಗತಿಗಳನ್ನು ಪುನರಾರಂಭಿಸುವ ಬಗ್ಗೆ ನಿರ್ಧರಿಸಲಾಗುತ್ತದೆ.

ಭಾನುವಾರದ ತರಗತಿಗಳು ವೆಬ್ ಕಾಸ್ಟ್ ಮೂಲಕ ಆನ್ ಲೈನ್‌ನಲ್ಲಿ ಮುಂದುವರಿಯುತ್ತದೆ. ಪ್ರತಿ ಭಾನುವಾರ ಬೆಳಿಗ್ಗೆ 10ರಿಂದ 11ರವರೆಗೆ ಪ್ರಾಥಮಿಕ ತರಗತಿಗಳನ್ನು ಕೂಡ ಆನ್ ಲೈನ್‌ನಲ್ಲಿ ನಡೆಸಲಾಗುತ್ತದೆ. ಪ್ರತಿ ತಿಂಗಳ ಮೊದಲನೇ ಭಾನುವಾರ ಹೊಸ ಬ್ಯಾಚ್ ಶುರುವಾಗುತ್ತದೆ.

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)
ಪ್ರಕಾಶ್‌ಮಾರ್ಗ (ಮರಾಠಿ)
ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/-ಡಿಡಿಯನ್ನು
'Manasa Light Age Foundation'
ಹೆಸರಿನಲ್ಲಿ ಕಳುಹಿಸಬೇಕು.
ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.

## ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.


ಫೆಬ್ರವರಿ 1ರಂದು, 11ನೇ ವಿಶ್ವ ಚಾನೆಲ್ಸ್ ದಿನದ ಪ್ರಯುಕ್ತ, ಲೈವ್ ಲೈಟ್ ಚಾನೆಲಿಂಗ್ ಸೆಷನ್‌ಗಳನ್ನು ತಪೋನಗರದಲ್ಲಿ ನಡೆಸಲಾಯಿತು.

## ಸುದ್ದಿ-ಸೂಚನೆಗಳು

- ಮಹರ್ಷಿ ಅಮರರವರ 102ನೇ ಹುಟ್ಟು ಹಬ್ಬದ ವಾರ್ಷಿಕೋತ್ಸವವನ್ನು ಆನೇಕಲ್‌ನಲ್ಲಿ 2-2-2021ರಂದು ಹಾಗೂ ತಪೋನಗರದಲ್ಲಿ 7-2-2021ರಂದು ಆಚರಿಸಲಾಯಿತು.
- 11ನೇ ವಿಶ್ವ ಚಾನೆಲ್ಸ್ ದಿನವನ್ನು 1-2-2021 ರಂದು ಆಚರಿಸಲಾಯಿತು. ಆ ದಿನದಂದು ಸಾವಿರಾರು ಶಾಲೆಗಳಿಂದ ಲಕ್ಷಾಂತರ ಮಕ್ಕಳು ಲೈಟ್ ಚಾನೆಲ್ ಮಾಡಿದರು. ಪ್ರಪಂಚದ ವಿವಿಧ ಭಾಗಗಳಿಂದ ಸಾವಿರಾರು ಮಂದಿ, ತಪೋನಗರದ ಧ್ಯಾನಮಂದಿರದಿಂದ ಅಯೋಜಿಸಲಾಗಿದ್ದ ಮಾರ್ಗದರ್ಶಿತ ಲೈವ್ ಆನ್‌ಲೈನ್ ಲೈಟ್ ಚಾನೆಲಿಂಗ್ ಸೆಷನ್‌ಗಳಲ್ಲಿ ಭಾಗವಹಿಸಿದರು.

## ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 06 | ಶನಿ | ಕೃಷ್ಣಾಷ್ಟಮಿ |
| 11 | ಗುರು | ಮಹಾ ಶಿವರಾತ್ರಿ |
| 13 | ಶನಿ | ಅಮಾವಾಸ್ಯೆ |
| 21 | ಭಾನು | ಶುಕ್ಲ ಅಷ್ಟಮಿ |
| 23 | ಮಂಗಳ | ಶುಕ್ಲ ದಶಮಿ |
| 28 | ಭಾನು | ಪೂರ್ಣಿಮಾ ಕಾಮದಹನ |

## ಈ ತಿಂಗಳು ತಪೋನಗರದಲ್ಲಿ

ಸದ್ಯದಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ವರ್ಚುವಲ್‌ಆಗಿ ವೆಬ್‌ಕಾಸ್ಟ್ ಮೂಲಕ ನಡೆಸಲಾಗುತ್ತಿದೆ ಮತ್ತು ಸದ್ಯಕ್ಕೆ ತಪೋನಗರದಲ್ಲಿ ಯಾವುದೇ ರೀತಿಯ ಭೌತಿಕ ಸಭೆಗಳು ಇಲ್ಲ.

| | |
|---|---|
| ಭಾನುವಾರಗಳು | : ಉಪನ್ಯಾಸಗಳು : ಬೆಳಿಗ್ಗೆ 11ರಿಂದ ಮಧ್ಯಾಹ್ನ 12<br>ಲೈಟ್ ಚಾನೆಲಿಂಗ್: ಮಧ್ಯಾಹ್ನ 12 ರಿಂದ 1ರವರೆಗೆ |
| 14-3-2021 | ಮಧ್ಯಾಹ್ನ 2ಕ್ಕೆ ಶಂಬಲ ಗ್ರೂಪ್ ಸಂಧಿಸುತ್ತದೆ |
| 11-3-2021 | ಮಹಾ ಶಿವರಾತ್ರಿ ವಿಶೇಷ ಧ್ಯಾನ ಮಧ್ಯಾಹ್ನ 12-1 |
| 21-3-2021 | ಮಧ್ಯಾಹ್ನ 2ಕ್ಕೆ ರಾ ಗ್ರೂಪ್ ಸಂಧಿಸುತ್ತದೆ |

## ಮಹಾ ಶಿವರಾತ್ರಿ ತಂತ್ರ

ಮಹಾಶಿವರಾತ್ರಿಯಂದು ರಾತ್ರಿ, ಶಿವನ ಅಂಶವನ್ನು ಋಷಿಗಳು ಕೆಳತರುತ್ತಾರೆ, ಮಾರನೆಯ ದಿನ ಬೆಳಿಗ್ಗೆ ಬೆಳಕಿನ ಕಿರಣದ ರೂಪದಲ್ಲಿ ಈ ಭೂಮಿಯ ಮೇಲಿರುವ ಪ್ರತಿಯೊಂದು ಮನೆಯನ್ನೂ ಪ್ರವೇಶಿಸುತ್ತದೆ. ಅವನ ಚೈತನ್ಯಗಳು 10 ದಿನಗಳವರೆಗೆ ಇಲ್ಲಿರುತ್ತವೆ. ನಾವು ಈ 10 ದಿನಗಳು ಅವನ ವಿಶೇಷ ಇರುವಿಕೆಯ ಅರಿವಿನಲ್ಲಿ ಇರಬಹುದು. ಶಿವನನ್ನು ಅನುಭವಿಸುವುದಕ್ಕಾಗಿ ಹಾಗೂ ಆತನ ಚೈತನ್ಯಗಳನ್ನು ಪಡೆಯುವುದಕ್ಕಾಗಿ ಈ ತಂತ್ರವನ್ನು, ನಿಮ್ಮ ಹಂತದ ಧ್ಯಾನದ ಬದಲಾಗಿ, ಮಹಾ ಶಿವರಾತ್ರಿಯ ದಿನದಿಂದ ಮುಂದಿನ ಹತ್ತು ದಿನಗಳವರೆಗೆ ನಾವು ಅಭ್ಯಾಸ ಮಾಡಬಹುದು. ನೀಲಿ ಬೆಳಕಿನಿಂದ ಮಾಡಲಾದ ಒಂದು ಬೃಹತ್ ಶಿವಲಿಂಗವನ್ನು ನಿಮ್ಮ ಮುಂದೆ ಇರುವಂತೆ ಊಹಿಸಿಕೊಳ್ಳಿ. ಈ ಶಿವಲಿಂಗವನ್ನು ಒಂದು ಬೆಳಕಿನ ಕಣವಾಗಿ ನೀವು ಪ್ರವೇಶಿಸಿದಂತೆ ಊಹಿಸಿಕೊಳ್ಳಿ. ನೀಲಿ ಬೆಳಕನ್ನು ಅನುಭವಿಸಿ.

## ಕಾಮದಹನ ತಂತ್ರ

28-03-2021, ಭಾನುವಾರದಂದು, ಚಂದ್ರೋದಯದ ಸಮಯದಲ್ಲಿ, ನಿಮ್ಮ ಮುಂದೆ ಒಂದು ಹೋಮಕುಂಡವಿದೆ ಎಂದು ಊಹಿಸಿಕೊಳ್ಳಿ. ಒಂದು ಬಾರಿ 'ಓಂ ಅಗ್ನಿದೇವಾಯ ನಮಃ' ಎಂಬ ಮಂತ್ರವನ್ನು ಹೇಳಿ ಅಗ್ನಿದೇವನನ್ನು ಆವಾಹಿಸಿ ಮತ್ತು ಹೋಮಕುಂಡದಲ್ಲಿ ಬೆಂಕಿಯನ್ನು ಊಹಿಸಿಕೊಳ್ಳಿ. ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳನ್ನು ಊಹಿಸಿಕೊಳ್ಳಿ. ಕಾಮವು ನಮ್ಮಿಂದ ಒಂದು ಹೊಗೆಭರಿತ ಅಥವಾ ಕಪ್ಪು ಚೆಂಡಿನ ರೂಪದಲ್ಲಿ ಹೊರಬರುತ್ತಿದೆ ಎಂದು ಒಂದು ಅಥವಾ ಎರಡು ನಿಮಿಷಗಳ ಕಾಲ ಭಾವಿಸಿಕೊಳ್ಳಿ, ಅದನ್ನು ನಿಮ್ಮ ಕೈಗಳಲ್ಲಿ ಸಂಗ್ರಹಿಸಿ ಹೋಮಾಗ್ನಿಯಲ್ಲಿ ಹಾಕಿ. ಅದು ಸಂಪೂರ್ಣವಾಗಿ ಭಸ್ಮವಾಗುತ್ತದೆ. ಇದೇ ರೀತಿಯಾಗಿ ಉಳಿದ ಐದನ್ನೂ ಪುನರಾವರ್ತಿಸಿ. ನಂತರ ಅಗ್ನಿದೇವನಿಗೆ ಕೃತಜ್ಞತೆಯನ್ನು ಸಲ್ಲಿಸಿ. ನಂತರ ಸ್ವಲ್ಪಸಮಯದವರೆಗೆ ನಿಮ್ಮಲ್ಲಿ ಬೆಳಕನ್ನು ಅನುಭವಿಸಿ.

ಧ್ಯಾನಿಗಳಿಗೆ ಭಾನುವಾರದ ತರಗತಿಗಳ ವೆಬ್‌ಕಾಸ್ಟ್ ನೇರಪ್ರಸಾರ ಲಭ್ಯವಿದೆ. ಇದರ ವಿವರಗಳಿಗೆ ದಯವಿಟ್ಟು ಇ-ಮೇಲ್ ಮೂಲಕ ಮಾನಸ ಕಛೇರಿಯನ್ನು ಸಂಪರ್ಕಿಸಿ.

ಗುರೂಜಿಯವರನ್ನು ಈಗ ಸ್ಪೀಕಿಂಗ್ ಟ್ರೀ ನಲ್ಲಿ ಮಾಸ್ಟರ್ ಎಂದು ಪಟ್ಟಿ ಮಾಡಲಾಗಿದೆ. ಅವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ವೀಕ್ಷಿಸಲು ದಯವಿಟ್ಟು www.speakingtree.inಗೆ ಭೇಟಿ ಕೊಡಿ.

## 11ನೇ ವಿಶ್ವ ಚಾನೆಲ್ಸ್ ದಿನ

ಒಂದು ವರದಿ

ಮನೋಜ್ ಚೋಪ್ರ; ಅನು: ಸುಜಾತ ವಿ

ನಾವು ನಿಸ್ವಾರ್ಥದಿಂದ ವಿಶ್ವದ ಕಾರಣಕ್ಕಾಗಿ ಏನನ್ನಾದರೂ ಸಾಧಿಸಲು ಬಯಸಿದರೆ, ಇಡೀ ವಿಶ್ವವೇ ಸಂಚು ಮಾಡಿ ಅದನ್ನು ಸಾಧಿಸಲು ನಮಗೆ ಸಹಾಯ ಮಾಡುತ್ತದೆಂದು ನಾನು ನಂಬಿದ್ದೇನೆ. ವಿಶ್ವ ಚಾನೆಲ್ಸ್ ದಿನವಾದ ಫೆಬ್ರವರಿ 1ರಂದು ಆದದ್ದು ಅದೇ. ಆ ಪವಿತ್ರವಾದ ದಿನದಂದು, ಲಕ್ಷಾಂತರ ಮಕ್ಕಳು ಹಾಗು ವಯಸ್ಕರು ಬೆಳಕನ್ನು ಚಾನಲ್ ಮಾಡಿದರು ಮತ್ತು ಪ್ರೀತಿ, ಶಾಂತಿ ಮತ್ತು ಭರವಸೆಯನ್ನು ಧರೆಗೆ ತಂದರು.

ಹಿಂದಿನ 11 ವರ್ಷಗಳಿಂದ ಈ ಚಟುವಟಿಕೆಯು ಹೆಚ್ಚು ಕಮ್ಮಿ ಮಕ್ಕಳಿಗೆ ಹಾಗೂ ಶಿಕ್ಷಕರಿಗೆ ಮಾತ್ರ ಸೀಮಿತಗೊಂಡಿತ್ತು. ಈ ವರ್ಷ ಸಾಂಕ್ರಾಮಿಕ ಪಿಡುಗಿನಿಂದಾಗಿ ಯಾವುದೇ ಚಟುವಟಿಕೆಗಳನ್ನು ಕೈಗೊಳ್ಳಲು ಅಸಾಧ್ಯವಾಗಿ ಕಾಣುತ್ತಿತ್ತು. ನಮ್ಮ ಕಾರ್ಯಕರ್ತರು ತಮ್ಮ ಆರೋಗ್ಯವನ್ನು ಅಪಾಯಕ್ಕೆ ಗುರಿಮಾಡಿಕೊಂಡು ಭೌತಿಕವಾಗಿ ಶಾಲೆಗಳಿಗೆ ಭೇಟಿ ಮಾಡುವುದು ನಮಗೆ ಬೇಕಾಗಿರಲಿಲ್ಲ. ಮೇಲಾಗಿ, ಹೆಚ್ಚು ಶಾಲೆಗಳು ಅಪೂರ್ಣವಾಗಿ ತೆರೆದಿತ್ತು ಮತ್ತು ಬಹಳ ಶಾಲೆಗಳು ಆನ್‌ಲೈನ್ ತರಗತಿಗಳನ್ನು ನಿರ್ವಹಿಸುತ್ತಿದ್ದರು. ಈ ಸವಾಲುಗಳ ನಡುವೆಯೂ, ನಾವು ವಿಶ್ವ ಚಾನೆಲ್ಸ್ ದಿನವನ್ನು ಆಚರಿಸಬೇಕೆಂದು ಬಯಸಿದ್ದೆವು. ಸಾಂಕ್ರಾಮಿಕ ಪಿಡುಗಿನಿಂದ ಮಾನವ ಜೀವಕ್ಕೆ ಹಾನಿಯಾಗಿತ್ತು ಮತ್ತು ಜನರು ಕೆಲಸಗಳನ್ನು ಕಳೆದುಕೊಂಡಿದ್ದರು. ಅನಿಶ್ಚಿತತೆ ಮತ್ತು ಹತಾಶೆ ಇಡೀ ಪ್ರಪಂಚದಲ್ಲಿ ತುಂಬಿತ್ತು. ನಾವು ಭೂತಾಯಿಯನ್ನು ಹೀಲ್ ಮಾಡಲು ಉದ್ದೇಶಿಸಿದೆವು ಮತ್ತು ದಿವ್ಯ ಬೆಳಕನ್ನು ಚಾನೆಲ್ ಮಾಡುವ ಮೂಲಕ ಪ್ರಪಂಚಕ್ಕೆ ಬೆಂಬಲವನ್ನು ನೀಡುವುದು ನಮ್ಮ ಉದ್ದೇಶವಾಗಿತ್ತು. ನಾವು ಪ್ರಮಾಣಿಕವಾಗಿ 'ಬೆಳಕಿಗೆ' ಪ್ರಾರ್ಥಿಸಿದೆವು ಮತ್ತು ಸಹಾಯವನ್ನು ಕೇಳಿದೆವು. ಈ ಪ್ರಪಂಚಕ್ಕಾಗಿ ಲೈಟ್ ಚಾನೆಲ್ ಸೆಷನ್‌ಗಳನ್ನು ಲೈವ್ ಆಗಿ ನಡೆಸುವ ಮತ್ತು ಲೈಟ್ ಚಾನೆಲಿಂಗ್ ಸೂಚನೆಗಳ ವಿಡಿಯೋವನ್ನು ಮುದ್ರಿಸಿ ಶಾಲೆಗಳಿಗೆ ಕೊಡುವ ವಿಚಾರವು ನಮಗೆ ಉಡುಗೊರೆಯಾಗಿ ದೊರಕಿತು. ಆರಂಭದಲ್ಲಿ, ನಾವು ಇಂಗ್ಲೀಷ್ ಮತ್ತು ಕನ್ನಡ ಭಾಷೆಗಳಲ್ಲಿ ವಿಡಿಯೋ ಸೆಷನ್‌ಗಳನ್ನು ಮುದ್ರಿಸಲು ಯೋಚಿಸಿದೆವು ಆದರೆ ಮಹಾರಾಷ್ಟ್ರ ಹಾಗೂ ಉತ್ತರ ಭಾರತದಿಂದ ಬಂದ ಕೋರಿಕೆಗಳಿಂದಾಗಿ, ನಾವು ಹಿಂದಿ ಮತ್ತು ಮರಾಠಿ ಭಾಷೆಗಳಲ್ಲೂ ಕೂಡ ಸೆಷನ್ ಗಳನ್ನು ಮುದ್ರಿಸಲು ನಿಶ್ಚಯಿಸಿದೆವು. ತಮಿಳು ಭಾಷೆಯ ಆಡಿಯೋ ಧ್ವನಿಮುದ್ರಣವನ್ನು ನಮ್ಮ ಉತ್ಸಾಹ ಭರಿತ ಕಾರ್ಯಕರ್ತರು ಮಾಡಿದರು ಮತ್ತು ತಮಿಳು ನಾಡಿನಲ್ಲಿ ಅದಕ್ಕೆ ಉತ್ತಮ ಪ್ರತಿಕ್ರಿಯೆ ದೊರಕಿತು.

ಶಾಲೆಗಳಿಗೆ ಮುದ್ರಣವನ್ನು ಕಳಿಸುವ ಹೊಸ ಯೋಚನೆಯನ್ನು ಏರಿಯ ಸಂಯೋಜಕರು ಮತ್ತು ಕಾರ್ಯಕರ್ತರು ಸ್ವಾಗತಿಸಿದರು. ನಮ್ಮ ಕಾರ್ಯಕರ್ತರು ಸಾವಿರಾರು ದೂರವಾಣಿ ಕರೆಗಳನ್ನು ಮಾಡಿದರು ಮತ್ತು ಭಾರತದ ಎಲ್ಲಾ ಶಾಲೆಗಳಿಗೆ ಸಂದೇಶವನ್ನು ಕಳಿಸಿದರು. ಅವರು ವ್ಯವಸ್ಥಿತವಾಗಿ ಕೆಲಸ ಮಾಡಿ ನಮ್ಮ ಸಂದೇಶವನ್ನು ನಿಖರವಾಗಿ ತಿಳಿಸಿದರು.

ಶಿಕ್ಷಕರ ಮತ್ತು ಶಾಲೆಯ ಅಧಿಕಾರಿಗಳ ಬೆಂಬಲವು ನಮ್ಮನ್ನು ಭಾವಪರವಶಗೊಳಿಸಿತು. ರೆಕಾರ್ಡ್ ಮಾಡಿದ ಸೆಷನ್‌ಗಳನ್ನು ತೋರಿಸುವ ನಮ್ಮ ಯೋಚನೆಯನ್ನು ಅವರು ಒಪ್ಪಿದರು ಮತ್ತು ಈ ಅನನ್ಯವಾದ ರೀತಿಯಲ್ಲಿ ವಿಶ್ವ ಚಾನೆಲ್ಸ್ ದಿನದಂದು ಭಾಗವಹಿಸುತ್ತೇವೆಂದು ನಮಗೆ ಭಾಷೆ ಕೊಟ್ಟರು.

ವಿಶ್ವ ಚಾನೆಲ್ಸ್ ದಿನ ಹೆಚ್ಚು ಆನಂದಮಯವಾದ ದಿನವಾಗಿತ್ತು. ಬೆಳಿಗ್ಗೆ 8 ಘಂಟೆಗೆ ಇಂಗ್ಲೀಷ್ ಭಾಷೆಯಲ್ಲಿ ಲೈವ್ ಸೆಷನ್ ಆರಂಭವಾಯಿತು ನಂತರ ಮಧ್ಯಾಹ್ನ ಹಿಂದಿಯ ಸೆಷನ್ ನಡೆಯಿತು ಮತ್ತು ರಾತ್ರಿ 9 ಘಂಟೆಗೆ ಇಂಗ್ಲೀಷ್‌ನಲ್ಲಿ ಕೊನೆಯ ಸೆಷನ್ ನಡೆಯಿತು. ಎಲ್ಲಾ ಮೂರು ಸೆಷನ್‌ಗಳನ್ನು ಪ್ರಪಂಚದ ಎಲ್ಲೆಡೆ ವೆಬ್‌ಕಾಸ್ಟ್ ಮಾಡಲಾಗಿತ್ತು. ಸಾವಿರಾರು ಜನರು ಲೈವ್ ವೆಬ್‌ಕಾಸ್ಟ್‌ನಲ್ಲಿ ಭಾಗವಹಿಸಿದರು ಮತ್ತು ಬೆಳಕನ್ನು ಚಾನೆಲ್ ಮಾಡಿದರು. 1300ಕ್ಕೂ ಹೆಚ್ಚಿನ ಶಾಲೆಗಳಿಂದ ಲಕ್ಷಕ್ಕೂ ಮೀರಿದ ಮಕ್ಕಳು ಬೆಳಕನ್ನು ಚಾನೆಲ್ ಮಾಡುವ ಮೂಲಕ ವಿಶ್ವ ಚಾನೆಲ್ಸ್ ದಿನವನ್ನು ಆಚರಿಸಿದರು. ನಮ್ಮ ವೀಡಿಯೋಗಳ ಮೂಲಕ ಲೈಟ್ ಚಾನೆಲ್ ಮಾಡುವ ನಮ್ಮ ಆಲೋಚನೆಯನ್ನು ಶಾಲೆಗಳು ಪ್ರಶಂಸಿಸಿದರು. ಆನ್‌ಲೈನ್ ಮತ್ತು ಆಫ್‌ಲೈನ್ ಸೆಷನ್‌ಗಳ ಫೋಟೋಗಳನ್ನು, ಸ್ವಯಂಪ್ರೇರಿತರಾಗಿ ನೂರಾರು ಶಾಲೆಗಳು ಕಳುಹಿಸಿಕೊಟ್ಟವು. ಬಹಳ ಜನರು ಚಾನೆಲಿಂಗ್ ಮಾಡಿದ ನಂತರ ಅಪಾರ ಶಾಂತಿಯನ್ನು ಮತ್ತು ಆನಂದವನ್ನು ಅನುಭವಿಸಿದರು. ಅವರ ಪ್ರತಿಕ್ರಿಯೆ ನಮ್ಮ ಇಡೀ ತಂಡಕ್ಕೆ ಇನ್ನೂ ಹೆಚ್ಚು ಸ್ಫೂರ್ತಿ ಕೊಟ್ಟಿತು.

ಕೆಲಸ ಮಾಡುವುದಕ್ಕೆ ನಮ್ಮ ಸ್ವಯಂಸೇವಕರಿಗೆ ಇರುವ ಪ್ರೀತಿಯೇ ವಿಶ್ವ ಚಾನೆಲ್ಸ್ ದಿನದ ಯಶಸ್ಸಿನ ಚಾಲನಾ ಶಕ್ತಿಯಾಗಿದೆ. ಈ ಕೆಲಸದ ಬಗ್ಗೆ ಅವರಿಗೆ ಇರುವ ಅಪಾರ ಉತ್ಸಾಹವು, ವಿಷಮಸ್ಥಿತಿಯನ್ನು ಅವಕಾಶಗಳನ್ನಾಗಿ ಪರಿವರ್ತಿಸಿತು. ಇದು, ಭೂ ಮಾತೆಯನ್ನು ಗುಣಪಡಿಸಲು ಮತ್ತು ಇದನ್ನು ಬದುಕಲು ಉತ್ತಮ ಸ್ಥಳವನ್ನಾಗಿ ಮಾಡಲು ಲಕ್ಷಾಂತರ ಮಕ್ಕಳು, ಶಿಕ್ಷಕರು ಹಾಗೂ ವಯಸ್ಕರು ಮಾಡಿದ ನಿಸ್ವಾರ್ಥ ಪ್ರಯತ್ನವೂ ಆಗಿತ್ತು. ■

## ಲೈಟ್ ಚಾನಲ್ಸ್ ವಿಶ್ವ ಸಂಚಲನ

ಇದು, ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವುದಕ್ಕಾಗಿ ಆತ್ಮಪ್ರಜ್ಞೆಯಲ್ಲಿ ನಡೆಯುವ ಒಂದು ಸಂಚಲನ. ಭಾಷಣಗಳು, ಪಾವುಟಗಳಿಲ್ಲದ, ಬೆಳಕನ್ನು ಚಾನಲ್ ಮಾಡಿದರಷ್ಟೇ ಸಾಕಾಗುವ ಒಂದು ಸಂಚಲನ. ಪದಗಳು ಮಾಡಲಾಗದ ಎಲ್ಲವನ್ನೂ ಬೆಳಕೇ ಮಾಡುತ್ತದೆ.

ನಾವು ಚಾನಲ್ ಮಾಡಿ ಬೆಳಕನ್ನು ಹರಡಿದಾಗ, ಅದು ಬೇರೆಯವರ ಹೃದಯಗಳನ್ನು ಮತ್ತು ಮನೆಗಳನ್ನು ಪ್ರವೇಶಿಸುತ್ತದೆ ಮತ್ತು ಆಲೋಚನೆಗಳು ಮತ್ತು ಭಾವನೆಗಳಲ್ಲಿರುವ ಕತ್ತಲನ್ನು ಪರಿವರ್ತಿಸುತ್ತದೆ. ವ್ಯಕ್ತಿಗಳೊಂದಿಗೆ ಪ್ರಪಂಚವೂ ಪರಿವರ್ತನೆಗೊಳ್ಳುತ್ತದೆ.

ಇದು ಭೌತಿಕ ಬೆಳಕಲ್ಲ, ಆದರೆ ಇದು, ಯಾವುದರಿಂದ ಇಡೀ ಸೃಷ್ಟಿ ಬಂದಿದೆಯೋ ಆ ಅತಿ ಸೂಕ್ಷ್ಮ ಬೆಳಕು. ಈ ಬೆಳಕಿನಲ್ಲಿ ಎಲ್ಲವೂ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ, ಆದರೆ ಎಲ್ಲಾ ಕಡೆ ಇದೆ.

ನಾವು ಪ್ರತಿದಿನ ಎದ್ದಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ಚಾನಲ್ ಮಾಡಿ ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.

ಚಾನಲ್ ಮಾಡಿ ಬೆಳಕನ್ನು ಹರಡುವುದಕ್ಕಾಗಿ, ನಿಮ್ಮ ಮೇಲೆ ಬೆಳಕಿನ ಸಾಗರವೊಂದನ್ನು ಕಲ್ಪಿಸಿಕೊಳ್ಳಿ, ನಂತರ ಈ ಸಾಗರದಿಂದ ಬೆಳಕಿನ ದಪ್ಪ ಕಿರಣವೊಂದು ಕೆಳಬಂದಂತೆ ಕಲ್ಪಿಸಿಕೊಳ್ಳಿ. ಈ ಬೆಳಕು ನಿಮ್ಮನ್ನು ಪ್ರವೇಶಿಸಿ ನಿಮ್ಮ ದೇಹವನ್ನು ಸಂಪೂರ್ಣವಾಗಿ ತುಂಬುತ್ತಿದೆಯೆಂದು ಕಲ್ಪಿಸಿಕೊಳ್ಳಿ, ಒಂದು ನಿಮಿಷ ಈ ಬೆಳಕನ್ನು ಅನುಭವಿಸಿ. ನಂತರ ಈ ಬೆಳಕು ನಿಮ್ಮ ದೇಹದಿಂದ ಹೊರಬಂದು ನಿಧಾನವಾಗಿ ಸುತ್ತಲೂ ಹರಡುತ್ತಾ, ನಿಮ್ಮ ಮನೆ, ಪ್ರದೇಶ, ದೇಶ ಮತ್ತು ಇಡೀ ಪ್ರಪಂಚವನ್ನು ತುಂಬುತ್ತಿದೆ ಎಂದು ಕಲ್ಪಿಸಿಕೊಳ್ಳಿ.

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರವರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಎಲ್ಲರಿಗೂ ಹರಡಿ.

www.lightchannels.comಗೆ ಭೇಟಿ ನೀಡಿ.

## ಶಂಬಲದ ನಿಯಮಗಳು

**ಈ ಏಳು ನಿಯಮಗಳನ್ನು ಶಂಬಲದಲ್ಲಿ ವಾಸಿಸುತ್ತಿರುವ ಜನರು ಅಭ್ಯಾಸ ಮಾಡುತ್ತಾರೆ. ಅವರು ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವನದಲ್ಲಿಯೇ ಬದುಕುತ್ತಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ನಂತರ ಅವುಗಳನ್ನು ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ನಕಾರಾತ್ಮಕತೆಗಳನ್ನು ಗೆಲ್ಲಲು ದೇಹ, ಮನಸ್ಸು ಮತ್ತು ಬುದ್ಧಿಗಳನ್ನು ಸಿದ್ಧಗೊಳಿಸುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

## ಗುರೂಜಿಯವರ ನುಡಿಗಳು

**ಗುರೂಜಿಯವರ ಭಾಷಣಗಳಿಂದ ಆಯ್ದ ಭಾಗಗಳು**

**ಸಂ: ಶೋಭಾ ಕೆ. ರಾವ್; ಅನು: ಸುಜಾತ ವಿ**

ಜೂಲೈ 2006

ಒಬ್ಬ ವ್ಯಕ್ತಿ ನನ್ನ ಜೊತೆ 24 ಘಂಟೆಗಳನ್ನು ಕಳೆಯಬೇಕೆಂದು ಬಯಸಿದರು. ಜನರು ನನ್ನ ಜೊತೆ ಹೆಚ್ಚು ಸಮಯ ಕಳೆಯುವುದಕ್ಕೆ ಇಷ್ಟ ಪಡುತ್ತಾರೆ. ನನಗೆ ಇದು ಅರ್ಥವಾಗುತ್ತದೆ. ನಂತರ ನಾನು ಇದರ ಬಗ್ಗೆ ಯೋಚಿಸಲಾರಂಭಿಸಿದೆ – ಅದು ಬರೀ ಕುತೂಹಲವೋ ಅಥವಾ ನಾನು ಏನು ಮಾಡುತ್ತೇನೆಂದು ಅವರು ನೋಡಬೇಕಾಗಿತ್ತೊ. ನಾನು ಇವುಗಳನ್ನು ಹಾಸ್ಯಮಯವಾಗಿ ನೋಡಿದರೂ, ಅವುಗಳನ್ನು ನೋಡಿ ನಗುವುದಿಲ್ಲ. ನಾನು ಹಿಂದಿನ ಕಾಲಕ್ಕೆ ಹೋದೆ, ನಾವು 5000 ವರ್ಷಗಳ ಹಿಂದೆ ಕಳೆದ ಸಮಯಕ್ಕೆ, ಜನರು ಗುರುಕುಲದಲ್ಲಿ ವಾಸಿಸುತ್ತಿದ್ದ ಕಾಲಕ್ಕೆ. ಅವರೆಲ್ಲರು ಗುರುವಿನ ಜೊತೆ ಮತ್ತು ಗುರುವಿನ ಸಂಸಾರದ ಜೊತೆ 24 ಘಂಟೆ ಕಾಲ ಇರುತ್ತಿದ್ದರು. ಅದು ಅದ್ಭುತವಾದ ವಿಷಯವಾಗಿತ್ತು, ಆದರೆ ಅಲ್ಲಿ ಇನ್ನೊಂದು ಅಂಶವಿತ್ತು – ಗುರುಗಳು ಕೂಡ ಜನರನ್ನು 24 ಘಂಟೆಗಳ ಕಾಲ ಗಮನಿಸುತ್ತಿದ್ದರು! ನಿಮಗೆ ನನ್ನ ಬಗ್ಗೆ ಹೆಚ್ಚು ತಿಳಿಯಬೇಕೆಂದಿದ್ದರೆ, ನಾನು ನಿಮ್ಮ ಬಗ್ಗೆ ಹೆಚ್ಚು ತಿಳಿಯಬೇಕು! ನಾನು ಇದಕ್ಕೆ ಅಡ್ಡಿಪಡಿಸುವುದಿಲ್ಲ, ಆದರೆ ನಾನು ಒಂದು ವಿಷಯವನ್ನು ನಿಮಗೆಲ್ಲರಿಗೂ ಹೇಳಲು ಬಯಸುತ್ತೇನೆ – "ನಮಗೆ ಎಷ್ಟೊಂದು ಜ್ಞಾನವನ್ನು ಕೊಡಲಾಗಿದೆ. ಅವೆಲ್ಲವನ್ನೂ ಬಳಸಿಕೊಳ್ಳಿ. ನಿಮಗೆ ಕೊಟ್ಟ ಉತ್ತರಗಳನ್ನೆಲ್ಲಾ ಬಳಸಿ. ನೀವು ಕಾರ್ಯಗತಗೊಳಿಸಲು, ಅರ್ಥಮಾಡಿಕೊಳ್ಳಲು ಮತ್ತು ಅವುಗಳನ್ನು ನಿಮ್ಮ ಸ್ವಂತ ಜ್ಞಾನವನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಿ ನಂತರ ನನ್ನ ಹತ್ತಿರ ಬನ್ನಿ. ನಾನು ಸಿದ್ಧನಾಗಿದ್ದೇನೆ. ನನ್ನೊಡನೆ ವಾಸ ಮಾಡಬಹುದು. ಬಚ್ಚಿಡುವುದಕ್ಕೆ ನನ್ನಲ್ಲಿ ಏನೂ ಇಲ್ಲ. ಪಾರದರ್ಶಕವಾಗಿರುವುದರಲ್ಲಿ, ಪ್ರಾಮಾಣಿಕರಾಗಿರುವುದರಲ್ಲಿ ಬಹಳ ಸಂತೋಷ ಸಿಗುತ್ತದೆ, ಇದನ್ನು ನಾನು ಯಾವಾಗಲು ಆನಂದಿಸಿದ್ದೇನೆ".

ನಾಳೆಯಿಂದ, ಆಷಾಢ ಮಾಸ ಆರಂಭವಾಗುತ್ತದೆ. ಈ ಒಂದು ತಿಂಗಳಿನಲ್ಲಿ, ನಾವು ಪರಬ್ರಹ್ಮನಿಂದ ಚೈತನ್ಯಗಳನ್ನು ಪಡೆಯುತ್ತೇವೆ. ಈ ಸಮಯದಲ್ಲಿ ನಾವು ಹೆಚ್ಚು ಧ್ಯಾನವನ್ನು ಮಾಡಬೇಕು. ನಿಮಗೆ ಹೆಚ್ಚು ಧ್ಯಾನ ಮಾಡಲು ಆಗದಿದ್ದರೆ, ಪರಬ್ರಹ್ಮನಲ್ಲಿ ಹೆಚ್ಚು ಮಗ್ನರಾಗಿರಿ; ಅವನ ಇರುವಿಕೆಯ ಅರಿವಿರಲಿ; ಈ ಭೂಮಿಯ ಮೇಲೆ ಚೈತನ್ಯಗಳು ಸುರಿಯುತ್ತಿರುವ ಬಗ್ಗೆ ಅರಿವಿರಲಿ. ಗುರು ಪೂರ್ಣಿಮೆಯ ದಿನ, ನಾವು ಗರಿಷ್ಠ ಚೈತನ್ಯಗಳನ್ನು ಪಡೆಯುತ್ತೇವೆ. ಗುರುಪೂರ್ಣಿಮೆಗಾಗಿ ನಮ್ಮನ್ನು ನಾವು ತಯಾರಿ ಮಾಡಿಕೊಳ್ಳೋಣ, ಮತ್ತು ನಾಳೆಯಿಂದ, ನಮ್ಮ ಸಾಧನೆಯನ್ನು ಬಲಪಡಿಸೋಣ. ಆಷಾಢ ಮಾಸದಲ್ಲಿ, ರಾಹು ಕಾಲ ಅಥವಾ ಯಮಗಂಡ ಕಾಲ ಇರುವುದಿಲ್ಲ; ಪ್ರತಿ ಕ್ಷಣವು ದಿವ್ಯ ಕ್ಷಣವಾಗಿರುತ್ತದೆಂದು ನಿಮಗೆ ತಿಳಿದಿರಲಿ. ಜನರಿಗೆ, ಪ್ರಾಚೀನ ಜ್ಞಾನಿಗಳಿಗೆ ಮತ್ತು ಋಷಿಗಳಿಗೆ ಇವುಗಳ ಬಗ್ಗೆ ತಿಳಿದಿತ್ತು. ಅವರು ಪ್ರತಿ ಕ್ಷಣವನ್ನು ಸಾಧನೆಗಾಗಿ ಬಳಸಲು ಬಯಸುತ್ತಿದ್ದರು. ಅದಕ್ಕಾಗಿಯೇ ಅವರು, ಹೆಚ್ಚು ಸಮಯ ತೆಗೆದುಕೊಳ್ಳುವಂತಹ ಮದುವೆ ಕಾರ್ಯಗಳಲ್ಲಿ ತೊಡಗಿಕೊಳ್ಳುತ್ತಿರಲಿಲ್ಲ. ಅವರು ಯಾವುದೇ ಹೆಚ್ಚುವರಿ ಚಟುವಟಿಕೆಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ. ಕ್ರಮೇಣ ಸಮಯ ಕಳೆದಂತೆ, ಆಷಾಢ ಮಾಸವು ಮದುವೆಗಳಿಗೆ ಶುಭವಲ್ಲವೆಂದು ಜನರು ತಪ್ಪಾಗಿ ತಿಳಿದರು. ನಮಗೆ ಇದು ತಿಳಿದಿರಲಿ. ಧ್ಯಾನಿಗಳಿಗೆ, ಯಾವುದೇ ಮಾಸ, ಯಾವುದೇ ಕ್ಷಣ ದಿವ್ಯವಾದ ಕ್ಷಣ ಯಾಕೆಂದರೆ ನಿಮ್ಮಲ್ಲಿ ಬೆಳಕು ಇರುತ್ತದೆ ಮತ್ತು ಎಲ್ಲಾ ಶುಭಕರವಾದದ್ದನ್ನು ನೀವು ನಿಮ್ಮಲ್ಲಿಯೇ ಹೊಂದಿರುತ್ತೀರಿ. ಆದುದರಿಂದ, ನಾವು ಈ ಆಷಾಢ ಮಾಸವನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳೋಣ.

ನಮ್ಮ ಸ್ವಂತ ವ್ಯಾಮೋಹಗಳೇ ಅಜ್ಞಾನ. ಬೇಕಾಗಿರುವ ಮತ್ತು ಬೇಡದಿರುವ ಅನೇಕ ವಿಷಯಗಳು, ನಾವು ಹೊಂದಿರುವ ಹೆಚ್ಚುವರಿ ವಸ್ತುಗಳು, ಇವೆಲ್ಲವೂ ನಾವು ಮುಂದುವರಿಯುವುದನ್ನು ತಡೆಯುತ್ತವೆ. ಗಂಟು ಮೂಟೆಗಳೇ ಕೆಲವೊಮ್ಮೆ ನಮ್ಮ ಅಜ್ಞಾನವಾಗಿರುತ್ತದೆ. ನಾವು ದೇವಾಲಯವನ್ನು ಕಟ್ಟುವಾಗ, ಮೊದಲು ಕಟ್ಟಡವನ್ನು ನಿರ್ಮಿಸುತ್ತೇವೆ, ನಂತರ ವಿಗ್ರಹ, ನಂತರ ದೇವತೆ. ದೇವತೆ ಎಂದರೆ ಚೈತನ್ಯ. ಚೈತನ್ಯಗಳನ್ನು ಆಹ್ವಾನಿಸಲಾಗುತ್ತದೆ, ಅದನ್ನು ಸಂಗ್ರಹಿಸಿ ವಿಗ್ರಹದಲ್ಲಿ ಸ್ಥಾಪಿಸಲಾಗುತ್ತದೆ. ಹೀಗೆ ವಿಗ್ರಹವು ಅತಿಮುಖ್ಯವಾಗುತ್ತದೆ. ನಾವು ಪೂಜಿಸುತ್ತಾ ಹೋದಂತೆ, ಹೆಚ್ಚು ಚೈತನ್ಯಗಳು ಸಂಗ್ರಹವಾಗುತ್ತವೆ ಮತ್ತು ಈ ಚೈತನ್ಯಗಳು ಭೂಮಿಯ ಕೆಳಗಿಳಿಯುತ್ತವೆ. ವರ್ಷಗಳು ಕಳೆದಂತೆ, ವಿಗ್ರಹದ ಕೆಳಗೆ, ಭೂಮಿಯ ಕೆಳಗೆ, ಬೃಹತ್ತಾದ ಚೈತನ್ಯದ ಕ್ಷೇತ್ರವು ಉಂಟಾಗುತ್ತದೆ. ಆ ದೇವತೆ, ಆ ದೇವರೇ ಚೈತನ್ಯ. ನಾವು ಪ್ರಾರ್ಥಿಸಿದಾಗಲೆಲ್ಲ, ಚೈತನ್ಯದ ಕ್ಷೇತ್ರದಿಂದ ನಮಗೆ ಚೈತನ್ಯ ಬರುತ್ತದೆ. ವಿಗ್ರಹವು, ಬೃಹತ್ತಾದ ಚೈತನ್ಯದ ಕ್ಷೇತ್ರವನ್ನು, ಆ ದೇವರನ್ನು, ಆ ದೇವತೆಯನ್ನು, ಪ್ರತಿನಿಧಿಸುತ್ತದೆ. ನೀವು ವಿಗ್ರಹವನ್ನು ಮುಟ್ಟುವುದರಿಂದ, ವಿಗ್ರಹವು ಕಲುಷಿತವಾಗುವುದಿಲ್ಲ. ಮನುಷ್ಯರು ವಿಗ್ರಹವನ್ನು ಮುಟ್ಟಿದಾಗ, ಅದು ಅಪವಿತ್ರವಾಗುವುದಿಲ್ಲ. ಶುದ್ಧತೆಯು ಮನಸ್ಸಿನಲ್ಲಿದೆ. ಕಲ್ಮಶಗಳನ್ನು ಹೇಗೆ ತೆಗೆಯುವುದು? ಅದನ್ನು ಮತ್ತೆ ಹೇಗೆ ಪಾವನಗೊಳಿಸುವುದು? ಧಾರ್ಮಿಕ ಆಚರಣೆಗಳಿಂದ? ವಿಗ್ರಹವನ್ನು ಶುದ್ಧಮಾಡಲು ಎರಡು ವರ್ಷಗಳಾದರೂ ಬೇಕೆಂದು ಕೆಲವೊಮ್ಮೆ ಅವರು ಹೇಳುತ್ತಾರೆ. ಒಂದು ಸಾರಿ ಮುಟ್ಟಿದರೆ ಆ ಸ್ಪರ್ಶಕ್ಕೆ ಅಷ್ಟೊಂದು ಶಕ್ತಿಯಿದೆಯಾ?!

ಇಲ್ಲಿ ಇನ್ನೊಂದು ಅಂಶ ಕೂಡ ಇದೆ – ಮನುಷ್ಯರೇ ದೇವಾಲಯಗಳನ್ನು ನೋಡಿಕೊಳ್ಳುತ್ತಾರೆ, ಮನುಷ್ಯರೇ ದೇವಾಲಯದಲ್ಲಿ ದೇವರನ್ನು ನೋಡಿಕೊಳ್ಳುತ್ತಾರೆ! ಒಮ್ಮೊಮ್ಮೆ ನಾವು ಪತ್ರಿಕೆಗಳಲ್ಲಿ ಓದುತ್ತೇವೆ. ಏನೆಂದರೆ ದೊಡ್ಡ ದೇವಾಲಯಗಳಲ್ಲೂ ಕೂಡ ಹುಂಡಿಯಲ್ಲಿನ ಹಣವನ್ನು ಎಣಿಸುವಾಗ, ಅದರಲ್ಲಿ ಸ್ವಲ್ಪ ಹಣ ಕಳವಾಗಿರುತ್ತದೆ. ಭ್ರಷ್ಟಾಚಾರ ಇದೆ – ನಯವಾಗಿ ಮತ್ತು ತಾಂತ್ರಿಕವಾಗಿ ಹೇಳುವುದಾದರೆ – ಸರಿಯಾಗಿ ವಿಗ್ರಹದ ಎದುರಿನಲ್ಲೇ! ನಾನು ಅರ್ಥ ಮಾಡಿಕೊಳ್ಳಲು ವಿಫಲನಾಗಿದ್ದೇನೆ, ಇದು ವಾತಾವಾಣವನ್ನು ಮಾಲಿನ್ಯ ಮಾಡುವುದಿಲ್ಲವೇ? ಒಬ್ಬ ವ್ಯಕ್ತಿ ಹೇಳಿದ, "ಮುಟ್ಟಿದ್ದರಿಂದಲೇ, ದೇವತೆಯ ದಿವ್ಯ ತೇಜಸ್ಸಿಗೆ ಹಾನಿಯಾಗಿದೆ". ಇದರ ಬಗ್ಗೆ ನಾನು ಯೋಚಿಸುತ್ತಿದ್ದೆ. ಇದು ವಿಷಾದಕರವಾಗಿದೆ ಏಕೆಂದರೆ ಇದು ನಮ್ಮ ಅಜ್ಞಾನ. ದೇವರು ಕುಪಿತನಾಗಿದ್ದಾನೆಯೇ? ನಾನು ಬಹಳ ಪ್ರಾಮಾಣಿಕವಾಗಿ ತಿಳಿಯಲು ಬಯಸಿದ್ದೆ. ನಾನು ಇದನ್ನು ಅರ್ಥ ಮಾಡಿಕೊಳ್ಳುವುದಕ್ಕಾಗಿ ಆಳವಾದ ಸ್ಥಿತಿಗೆ ಹೋಗಲು ಧ್ಯಾನವನ್ನು ಕೂಡ ಮಾಡುತ್ತಿರಲಿಲ್ಲ. ಆಗ ನನಗೆ ಒಂದು ದೃಶ್ಯ ಕಾಣಿಸಿತು. ಅದು ಅದ್ಭುತವಾದ ದೃಶ್ಯ. ನನ್ನ ಗುರು, ಋಷಿಗಳು, ಅದ್ಭುತವಾದ ರೀತಿಗಳಲ್ಲಿ ನಮಗೆ ಕಲಿಸುತ್ತಾರೆ. ನಾನು ವಿಗ್ರಹವನ್ನು ನೋಡಿದೆ ಮತ್ತು ಅದರ ಸುತ್ತಲೂ ತುಂಬಾ ಬೆಳಕಿತ್ತು! ದಿವ್ಯ ತೇಜಸ್ಸು ಹಾಳಾಗಿದ್ದನ್ನು ನಾನು ನೋಡಲಿಲ್ಲ. ನನ್ನ ಸ್ವಂತ ಸಾಧಾರಣ ರೀತಿಯಲ್ಲಿ, ದೇವರು ಕುಪಿತಗೊಂಡಿಲ್ಲವೆಂದು ನನಗೆ ಅರ್ಥವಾಯಿತು! ಬಹುಶಃ ಪೂಜಾರಿಗಳು ಕೋಪಗೊಂಡಿರಬಹುದು! ಅನಾದಿ ಕಾಲದಿಂದಲೂ, ಅರ್ಚಕರು ಇದು ಸರಿ, ಇದು ತಪ್ಪು, ನಿಮ್ಮನ್ನು ದೇವಾಲಯದೊಳಗೆ ಬಿಡಬಾರದು, ನೀವು ಮುಟ್ಟಬಹುದು, ನೀವು ಮುಟ್ಟಬಾರದು, ಇತ್ಯಾದಿಯಾಗಿ ಹೇಳುತ್ತಲೇ ಬರುತ್ತಿದ್ದಾರೆ. ಪಾಪ ದೇವರು, ಅವನು ಏನನ್ನೂ ಹೇಳುವಂತೆಯೇ ಇಲ್ಲ! ಅರ್ಚಕರು ಬೆಳೆದಿಲ್ಲ, ಅಲ್ಲಿ ಬಹಳ ಅಜ್ಞಾನವಿದೆ. ನಮಗೆ ಈ ಜನರ ವಿರುದ್ಧ ವೈಯಕ್ತಿಕವಾಗಿ ಯಾವ ಭಾವನೆಯೂ ಇಲ್ಲ. ಅಜ್ಞಾನವು ನಮ್ಮ ಆಧ್ಯಾತ್ಮಿಕ ಅಭಿವೃದ್ಧಿಗೆ ಹೊರೆಯಾಗಿದೆ. ಅಯ್ಯಪ್ಪ ದೇವರು ಇನ್ನೂ ಅಲ್ಲಿಯೇ ಇದ್ದಾನೆ. ಅವನ ಚೈತನ್ಯಗಳು ಅಲ್ಲಿಯೇ ಇರುತ್ತವೆ. ವಿಗ್ರಹವು ಒಂದು ಚಿಹ್ನೆ ಅಷ್ಟೆ. ದೇವರು ಬೆಳಕು ಎಂಬ ಜ್ಞಾನ ನಿಮ್ಮಲ್ಲಿ ಇದ್ದಾಗ, ನೀವು ಆ ಬೆಳಕನ್ನು ಪ್ರವೇಶಿಸಬಹುದು. ನೀವು ಕಣ್ಣು ಮುಚ್ಚಿ ಧ್ಯಾನ ಮಾಡಿದಾಗ, ಈ ಜ್ಞಾನದ ಸಂಪರ್ಕ ಪಡೆಯಬಹುದು. ಈ ಜ್ಞಾನ, ಈ ಅರಿವು ನಮ್ಮ ಅಜ್ಞಾನವನ್ನು ತೆಗೆದುಹಾಕುತ್ತದೆ, ಹೊರೆಯನ್ನು ತೆಗೆದುಹಾಕುತ್ತದೆ. ಜ್ಞಾನವು, ವ್ಯಾಮೋಹದ ಹೊರೆಯನ್ನು ಮತ್ತು ಅವಿವೇಕಿ ವಿಷಯಗಳನ್ನು ಕಡಿಮೆ ಮಾಡುತ್ತದೆ. ಧ್ಯಾನದಲ್ಲಿ, ಸಮಾಧಿಯಲ್ಲಿ, ನಾವು ದೇವರನ್ನು ಅನುಭವಿಸುತ್ತೇವೆ. ನಾವು ಯಾವುದೇ ತೀರ್ಥಯಾತ್ರೆಗೆ, ಯಾವುದೇ ದೇವಾಲಯಗಳಿಗೆ ಹೋಗಬೇಕಾಗಿಲ್ಲ, ಮತ್ತು ನಾವು ವಿಗ್ರಹಗಳನ್ನು ಮುಟ್ಟ ಬೇಕಾಗಿಲ್ಲ ಮತ್ತು ಯಾವುದೇ ವಿವಾದದಲ್ಲಿ ತೊಡಗಬೇಕಾಗಿಲ್ಲ!! ನಾವು ಮೌನವಾಗಿ ನಮ್ಮ ಪ್ರಯಾಣವನ್ನು ಸಾಗಿಸಬೇಕು. ಈ ಅಜ್ಞಾನಗಳೆಲ್ಲವೂ ತೊಳೆದು ಹೋಗುತ್ತವೆ. ಇದಕ್ಕೆ ಸಮಯ ಬೇಕಷ್ಟೆ. ನಾವು ಸತ್ಯಯುಗಕ್ಕೆ ಪ್ರವೇಶ ಮಾಡುತ್ತಿದ್ದೇವೆ. ಎಲ್ಲೆಲ್ಲೂ ಅರಿವಿರುತ್ತದೆ; ಹೆಚ್ಚು ಪರಿಶುದ್ಧತೆ ಇರುತ್ತದೆ. ■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಕಾಂಚನಲತಾ

03–01–2021

ಇದು ಈ ಹೊಸ ವರುಷದ ಮೊದಲನೇ ತರಗತಿ. ನಿಮ್ಮೆಲ್ಲರಿಗೂ ಈ ಹೊಸ ವರುಷವು ತುಂಬಾ ಸಂತೋಷವಾದ ವರುಷವಾಗಿರಲೆಂದು ಮಾನಸ ಫೌಂಡೇಶನ್ ಪರವಾಗಿ ಹಾರೈಸುತ್ತೇನೆ. ಹೊಸ ವರುಷವು ಯಾವಾಗಲೂ ಹೊಸ ಶಕ್ತಿಗಳನ್ನು ತರುತ್ತದೆ, ಹೊಸ ಅವಕಾಶಗಳನ್ನು ತರುತ್ತದೆ ಮತ್ತು ಹೊಸ ಭರವಸೆಯನ್ನು ತರುತ್ತದೆ ಎಂದು ಗುರೂಜಿಯವರು ಹಲವಾರು ಸಂದರ್ಭಗಳಲ್ಲಿ ಹೇಳಿದ್ದನ್ನು ನಾವು ಕೇಳಿದ್ದೇವೆ. ಹೊಸ ವರುಷವು ಅನೇಕಾನೇಕ ಸಾಧ್ಯತೆಗಳನ್ನೂ ಕೂಡ ತರುತ್ತದೆ. ನಾವು ಈಗ ಲಸಿಕೆಯನ್ನು ಪಡೆದಿದ್ದೇವೆ, ಅದು ಜಗತ್ತಿಗೆ ಒಂದು ದೊಡ್ಡ ಭರವಸೆಯನ್ನು ತರುತ್ತದೆ. ಭರವಸೆ ಇದೆ. ಜನರಿಂದ ಬಂದ ಸಂದೇಶಗಳನ್ನು ಓದುವಾಗ ಅಥವಾ ಬರಹಗಳು, ಸುದ್ದಿಪತ್ರಗಳನ್ನು ಓದುವಾಗ ಜನರಲ್ಲಿ ಭರವಸೆ ಮೂಡಿರುವುದನ್ನು ನಾನು ಗ್ರಹಿಸಬಲ್ಲೆ. ನನ್ನಲ್ಲಿ ಭರವಸೆ ಮೂಡಿದೆ ಹಾಗೂ ನಮ್ಮೆಲ್ಲರಲ್ಲೂ ಭರವಸೆ ಮೂಡಿದೆಯೆಂಬುದು ನನಗೆ ಖಚಿತವಾಗಿದೆ.

ಒಬ್ಬ ವ್ಯಕ್ತಿಯು ಆಕಾಶಿಕ್ ದಾಖಲೆಗಳ ಬಗ್ಗೆ ವಿಚಾರವನ್ನು ಹಂಚಿಕೊಳ್ಳಲು ಕೋರಿದ್ದರು. ನಮ್ಮ ಪುಸ್ತಕಗಳಿಂದ ಮಾಹಿತಿಗಳನ್ನು ತೆಗೆದುಕೊಂಡಿದ್ದೇನೆ. ಆಕಾಶಿಕ್ ದಾಖಲೆಗಳು ಯಾವುವು? ಅವು ಉನ್ನತ ಪ್ರಜ್ಞಾವಸ್ಥೆಯ ಮಟ್ಟದಲ್ಲಿ ದಾಖಲಾದ ಎಲ್ಲಾ ಜೀವಿಗಳ ದಾಖಲೆಗಳು. ಅವು ನಮ್ಮ ಭಾವನೆಗಳ ಮತ್ತು ಆಲೋಚನೆಗಳ ಮುದ್ರಿಕೆಗಳು. ಆಕಾಶಿಕ್ ದಾಖಲೆಗಳ ಉದ್ದೇಶವೇನು? ಅದರ ಉದ್ದೇಶವೆಂದರೆ, ವಿವಿಧ ಕಾರಣಗಳಿಗಾಗಿ ಬೇಕಾಗುವ, ಎಲ್ಲಾ ಭಾವನೆಗಳನ್ನು, ಆಲೋಚನೆಗಳನ್ನು ಹಾಗೂ ಘಟನೆಗಳನ್ನು ಮುದ್ರಿಸುವುದು. ಗುರೂಜಿಯವರು ಒಂದು ಉದ್ದೇಶವನ್ನು ಹೇಳಿದ್ದರು. ನಮ್ಮ ಶರೀರವನ್ನು ತ್ಯಜಿಸಿದಾಗ ನಾವು ನಂತರ ಹೋಗಬೇಕಾಗಿರುವ ಸ್ಥಳಕ್ಕೆ ಹೋಗುತ್ತೇವೆ, ಯಮಧರ್ಮಲೋಕ ಎಂದಿಟ್ಟುಕೊಳ್ಳೋಣ. ಅಲ್ಲಿ ನಮ್ಮ ಮುಂದಿನ ಜನ್ಮದ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಇದರ ನಂತರ ಏನಾಗುತ್ತದೆ? ಈ ಪ್ರಕ್ರಿಯೆಗಳ ಮೇಲ್ವಿಚಾರಕರು ಅಲ್ಲಿರುತ್ತಾರೆ, ಅವರು ನಮ್ಮ ಬದುಕು ಮತ್ತು ನಮ್ಮ ವಿಧಿಯನ್ನು ನಿರ್ಧರಿಸುತ್ತಾರೆಂದು ಗುರೂಜಿಯವರು ಹೇಳಿದ್ದರು. ಅವರು ನಮ್ಮ ಆಕಾಶಿಕ್ ದಾಖಲೆಗಳನ್ನು ನೋಡಿ, ಅತ್ಯಂತ ಕಡಿಮೆ ಸಮಯದಲ್ಲಿ ವಿಮೋಚನೆ ಪಡೆಯಲು ನಮಗೆ ಸಾಧ್ಯವಾಗುವಂತಹ ನಮ್ಮ ಮುಂದಿನ ಜೀವನದ ಪಯಣವನ್ನು ನಿರ್ಧರಿಸುತ್ತಾರೆ. ವಿಮುಕ್ತರಾಗಲು ನಮಗೆ ಸಹಾಯ ಮಾಡುವುದಕ್ಕಾಗಿ ಪ್ರತಿಯೊಂದು ಹಂತದಲ್ಲೂ ಸಹಾಯವನ್ನು ನೀಡಲಾಗುತ್ತದೆ. ಇದು ನಮ್ಮ ವೈಯಕ್ತಿಕ ಪಯಣಕ್ಕೆ ಸೀಮಿತವಾಗಿದ್ದರೆ, ಆಕಾಶಿಕ್ ದಾಖಲೆಗಳಿಗೆ ಜಾಗತಿಕ ಯೋಗಕ್ಷೇಮಕ್ಕೆ ಒಳಗೊಂಡಂತೆ, ಬೇರೆ ಉದ್ದೇಶಗಳೂ ಇರುತ್ತವೆ. ಈ ದಾಖಲೆಗಳು ಹಿಂದಿನ ಘಟನೆಗಳ ಆಧಾರದ ಮೇಲೆ, ಜಾಗತಿಕ ಕಲ್ಯಾಣದ ವಿಷಯಗಳನ್ನು ಒಳಗೊಂಡ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಲು ಋಷಿಗಳಿಗೆ ಸಹಾಯಕಾರಿಯಾಗಬಹುದು. ಅವರು ಕೆಲವು ಘಟನೆಗಳನ್ನು ನೋಡಿದಾಗ ಅವರಿಗೆ ಕೆಲವೊಂದು ನಿಖರವಾದ ಅಂತದೃಷ್ಟಿ ದೊರೆಯಬಹುದು. ಇದು ನಾನು ಅರ್ಥ ಮಾಡಿಕೊಂಡಿರುವುದು. ಆಕಾಶಿಕ್ ದಾಖಲೆಗಳು ಘಟನೆಗಳ ದಾಖಲೆಗಳು. ಉದಾಹರಣೆಗೆ, ನಾನು ಮಹರ್ಷಿ ಅಮರರವರ ಮತ್ತು ಗುರೂಜಿಯವರ ಜೀವನಗಳ ಬಗ್ಗೆ ಆಲೋಚಿಸುತ್ತೇನೆ. ಮಹರ್ಷಿ ಅಮರರವರ ಬಗ್ಗೆ ನಮಗೆ ಎಲ್ಲವೂ ತಿಳಿದಿಲ್ಲ. ಅವರು ಮಾಡಿದ ಸೂಕ್ಷ್ಮ ಲೋಕದ ಸಾಹಸಗಳ ಬಗ್ಗೆ ಎಲ್ಲವೂ ನಮಗೆ ತಿಳಿದಿಲ್ಲ ಎಂದು ಗುರೂಜಿಯವರು ನಮಗೆ ಹೇಳುತ್ತಿದ್ದರು. ನಮಗೆ ಅವರುಗಳ ಜೀವನದ ಬಗ್ಗೆ ತಿಳಿದಿರುವುದೆಲ್ಲವೂ ಗುರೂಜಿಯವರಿಂದಲೇ ತಿಳಿದಿವೆ. ಅವುಗಳು ನಮಗೆ ದಾರಿದೀಪಗಳು. ಅವು ನಮಗೆ ಎಷ್ಟೊಂದು ಸಹಾಯ ಮಾಡುತ್ತವೆ. ನಮಗೆ ಅವರ ಜೀವನದ ಪೂರ್ಣ ಪರಿಚಯವಿದ್ದಿದ್ದರೆ, ಅದು ನಮಗೆ ಮತ್ತು ನಮ್ಮ ಮುಂದಿನ ಜನಾಂಗಕ್ಕೆ ಎಷ್ಟು ಉಪಯುಕ್ತವಾಗುತ್ತಿತ್ತು ಎಂಬುದನ್ನು ಊಹಿಸಿಕೊಳ್ಳಿ! ಆಕಾಶಿಕ್ ದಾಖಲೆಗಳಿಗೆ ಪ್ರವೇಶಾಧಿಕಾರ ಸುಮ್ಮನೇ ಹಾಗೇ ಸಿಗಲು ಸಾಧ್ಯವಿಲ್ಲ. ಅದರ ಹಿಂದೆ ಒಂದು ಉನ್ನತವಾದ ಉದ್ದೇಶವಿರಬೇಕಾಗುತ್ತದೆ.

ಸಂಸ್ಕೃತ ಪದವಾದ ಆಕಾಶ ಎಂದರೆ ಕೇವಲ ಪ್ರದೇಶ ಅಥವಾ ಗಗನ ಮಾತ್ರ ಅಲ್ಲ ಎಂದು ಗುರೂಜಿಯವರು ನಮಗೆ ವಿವರಿಸಿದ್ದರು. ಆಕಾಶ ಎಂದರೆ ಪ್ರಜ್ಞೆಯ ಸಾಗರ ಎಂದು ಅವರು ಹೇಳಿದ್ದರು. ಈ ಪ್ರಜ್ಞೆಯ ಸಾಗರವು ಇಡೀ ಭೌತಿಕ ಜಗತ್ತನ್ನು ತುಂಬಿರುತ್ತದೆ. ಈ ಪ್ರಜ್ಞೆಯು, ಎಲ್ಲಾ ಮಟ್ಟಗಳಲ್ಲೂ ಅಸ್ತಿತ್ವದಲ್ಲಿರುತ್ತದೆ ಎಂಬುದು ಒಂದು ಸ್ವಾರಸ್ಯಕರವಾದ ವಿಷಯ. ಇದು ಎಲ್ಲಾ ಮಟ್ಟಗಳಲ್ಲೂ ಅಸ್ತಿತ್ವದಲ್ಲಿರುತ್ತದೆ ಎಂದರೆ, ಅದು ಭೌತಿಕ, ಸೂಕ್ಷ್ಮ ಹಾಗೂ ಕಾರಣ (Causal) ಮಟ್ಟಗಳಲ್ಲಿ ಹಾಗೂ ನಮಗೆ ತಿಳಿಯದೇ ಇರುವ ಮಟ್ಟಗಳಲ್ಲೂ ಅಸ್ತಿತ್ವದಲ್ಲಿರುತ್ತದೆ ಎಂದು ಅರ್ಥ. ಇದು ಎಲ್ಲೆಲ್ಲೂ ಅಸ್ತಿತ್ವದಲ್ಲಿರುತ್ತದೆ.

ಈ ಪ್ರಜ್ಞೆಯ ಸಾಗರ ಅಥವಾ ಆಕಾಶ, ಮನಸ್ಸು ಮತ್ತು ಬುದ್ಧಿಯನ್ನು ಒಳಗೊಂಡಿದೆ. ಮನಸ್ಸು ಮತ್ತು ಬುದ್ಧಿಯಲ್ಲಿ ಭಾವನೆಗಳು ಹಾಗೂ ಆಲೋಚನೆಗಳನ್ನು ದಾಖಲಿಸಲಾಗುತ್ತದೆ ಎಂದು ಗುರೂಜಿಯವರು ವಿವರಿಸಿದ್ದರು. ಆಕಾಶವು ಬ್ರಹ್ಮಾಂಡದ ಮನಸ್ಸು ಅಥವಾ ಬ್ರಹ್ಮಾಂಡದ ಬುದ್ಧಿಶಕ್ತಿಯನ್ನು ಹೊಂದಿದೆ ಎಂದು ಹೇಳಬಹುದು. ಈ ದಾಖಲೆಗಳು ಮುದ್ರೆಗಳಂತೆ. ಪ್ರತಿಯೊಂದು ಆಲೋಚನೆ ಮತ್ತು ಭಾವನೆಗೆ ಚೈತನ್ಯವಿರುತ್ತದೆ ಮತ್ತು ಈ ಚೈತನ್ಯವು ಕಂಪನಗಳನ್ನು ಸೃಷ್ಟಿಸುತ್ತದೆ ಹಾಗೂ ಅದು ಒಂದು ಮುದ್ರೆಯಂತೆ ಆಕಾಶಿಕ್ ದಾಖಲೆಗಳಲ್ಲಿ ದಾಖಲಾಗುತ್ತದೆ ಎಂದು ಗುರೂಜಿಯವರು ಹೇಳಿದ್ದರು. ಈ ದಾಖಲೆಗಳು ಅಥವಾ ಮುದ್ರೆಗಳು ದೀರ್ಘಕಾಲದವರೆಗೆ ಉಳಿದಿರುತ್ತವೆ. ಈ ಭೂಮಿಗೆ ಸಂಬಂಧಿಸಿರುವ ದಾಖಲೆಗಳು ಮನ್ವಂತರದ ಕೊನೆಯವರೆಗೂ ಉಳಿದಿರುತ್ತವೆ. ಮುಕ್ತಿ ಪಡೆದು ತನ್ನ ಮೂಲಕ್ಕೆ ಹಿಂದಿರುಗಿರುವ ಆತ್ಮದ ಭಾವನೆಗಳು ಹಾಗೂ ಆಲೋಚನೆಗಳನ್ನು ಅಳಿಸಿಹಾಕಲಾಗುತ್ತದೆ. ಈ ದಾಖಲೆಗಳನ್ನು ಮತ್ತು ಮುದ್ರೆಗಳನ್ನು ಪ್ರವೇಶಿಸಬಹುದೇ? ಈ ದಾಖಲಾದ ಭಾವನೆಗಳನ್ನು ಮತ್ತು ಆಲೋಚನೆಗಳನ್ನು ಯಾರಾದರೂ ಓದಲು ಸಾಧ್ಯವೇ? ಉನ್ನತ ಉದ್ದೇಶಗಳಿದ್ದರೆ ಓದಲು ಸಾಧ್ಯ ಮತ್ತು ಋಷಿಗಳು ಖಂಡಿತಾ ಪ್ರವೇಶಿಸಬಹುದು ಎಂದು ಗುರೂಜಿಯವರು ಹೇಳಿದ್ದರು. ಅದಲ್ಲದೆ, ಋಷಿಗಳು ಎಲ್ಲವನ್ನೂ ಒಂದು ಉನ್ನತ ಉದ್ದೇಶಕ್ಕಾಗಿಯೇ ಮಾಡುತ್ತಾರೆ. ಆದರೆ, ನಾನು ನನ್ನದೇ ಭಾವನೆ ಮತ್ತು ಆಲೋಚನೆಗಳನ್ನು ತಿಳಿಯಬಯಸಿದರೆ, ನಾನು ಆಕಾಶಿಕ್ ದಾಖಲೆಗಳನ್ನು ಪ್ರವೇಶಿಸಬೇಕಾಗಿಲ್ಲ, ಏಕೆಂದರೆ ಅದು ನನ್ನ ವ್ಯವಸ್ಥೆಯೊಳಗೇ ದಾಖಲಾಗಿರುತ್ತದೆ. ನನ್ನ ಹಿಂದಿನ ಜನುಮಗಳ ಭಾವನೆಗಳು ಮತ್ತು ಆಲೋಚನೆಗಳೂ ಕೂಡ ನನ್ನ ವ್ಯವಸ್ಥೆಯೊಳಗೇ ಇರುತ್ತವೆ, ಸುಪ್ತಾವಸ್ಥೆಯ ಮನಸ್ಸಿನಲ್ಲಿ (unconscious mind). ಆದ್ದರಿಂದ ನಾನು ನನ್ನ ಆಕಾಶಿಕ್ ದಾಖಲೆಗಳನ್ನು ಪ್ರವೇಶಿಸಬೇಕಾಗಿಲ್ಲ.

ಆಕಾಶಿಕ್ ದಾಖಲೆಗಳ ಬಗ್ಗೆ ಓದುವಾಗ, ಅದರ ವಿಷಯಗಳನ್ನು ಕಲೆ ಹಾಕುತ್ತಿರುವಾಗ, ಗುರೂಜಿಯವರು ಉಲ್ಲೇಖಿಸಿದ್ದ ಒಂದು ಬಹಳ ಕುತೂಹಲಕಾರಿ ಘಟನೆಯೊಂದು ನನ್ನ ಗಮನಕ್ಕೆ ಬಂತು. ಅದು ಆಕಾಶಿಕ್ ದಾಖಲೆಗಳಿಗೆ ನೇರವಾಗಿ ಸಂಬಂಧಪಟ್ಟಿಲ್ಲವಾದರೂ, ಅದಕ್ಕೆ ಒಂದು ನಂಟಿದೆ; ಅದನ್ನು ನಿಮ್ಮೊಂದಿಗೆ ಹಂಚಿಕೊಳ್ಳಬೇಕು ಎನಿಸಿತು. ಕೆಲವು ವ್ಯಕ್ತಿಗಳು, ಈ ಜಗತ್ತನ್ನು ಬಿಟ್ಟು ಹೋದ ವ್ಯಕ್ತಿಗಳನ್ನು ನೋಡುತ್ತಾರೆ. ಉದಾಹರಣೆಗೆ, ಈ ಲೋಕವನ್ನು ಅಗಲಿದ ನಮ್ಮ ಪೋಷಕರು ಅಥವಾ ಸಂಬಂಧಿಕರು. ವ್ಯಕ್ತಿಗಳು ಮರಣಿಸಿದ ನಂತರ, ಈ ಭೂಮಿಯ ಮೇಲೆ ಇರಲು ಅವರಿಗೆ ಕೇವಲ ಹತ್ತು ದಿನಗಳ ಕಾಲ ಮಾತ್ರ ಅನುಮತಿ ಇರುತ್ತದೆ ಎಂದು ನಮಗೆ ತಿಳಿದಿದೆ. ಅದಾದ ನಂತರ, ಅವರನ್ನು ಇನ್ನೊಂದು ಸ್ಥಳಕ್ಕೆ ಮಾರ್ಗದರ್ಶಿಸಲಾಗುತ್ತದೆ.

(6ನೇ ಪುಟದಲ್ಲಿ ಮುಂದುವರೆದಿದೆ)

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು – ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫೀಯು ರೂ. 4500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀಯು ರೂ. 3500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

ಚೆಕ್/ಡಿಡಿಗಳನ್ನು 'Manasa Light Age Foundation' ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆ ಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಕಾಂಚನಲತಾ

(5ನೇ ಪುಟದಿಂದ ಮುಂದುವರೆದಿದೆ)

ಕೇವಲ, ಆತ್ಮಹತ್ಯೆ ಅಥವಾ ಅಪಘಾತದಲ್ಲಿ ಮರಣಿಸಿದ ಆತ್ಮಗಳಿಗೆ ತಕ್ಷಣ ಹಿಂದಿರುಗಲು ಸಾಧ್ಯವಾಗದಿರಬಹುದು. ಆದರೆ ಅಂತಹ ಸಮಯಗಳಲ್ಲೂ ಸಹ, ನಾವು ಅಂತಹ ಪ್ರಕರಣಗಳನ್ನು ಗಮನಿಸಿದಾಗ ಋಷಿಗಳಿಗೆ ಪ್ರಾರ್ಥನೆ ಮಾಡಿಕೊಂಡರೆ, ಋಷಿಗಳು ಅಂತಹ ಆತ್ಮಗಳನ್ನು ಸರಿಯಾದ ಸ್ಥಳಗಳಿಗೆ ಮಾರ್ಗದರ್ಶನ ಮಾಡುತ್ತಾರೆ. ಹಾಗೆಯೇ, ನಾವು ಸಹಜವಾಗಿ ಮರಣಿಸಿದ ವ್ಯಕ್ತಿಗಳನ್ನು ಕೆಲವೊಮ್ಮೆ ವರ್ಷಗಳ ನಂತರ ನೋಡುತ್ತೇವೆ. ಅದು ಹೇಗೆ ಸಾಧ್ಯ? ಏಕೆಂದರೆ, ಆ ಆತ್ಮ, ಆ ವ್ಯಕ್ತಿ ಇಲ್ಲಿರುವುದಿಲ್ಲವಾದರೂ, ಆ ವ್ಯಕ್ತಿಯು ತನ್ನ ವ್ಯಕ್ತಿತ್ವದ, ಆಲೋಚನೆಗಳ ಮತ್ತು ಭಾವನೆಗಳ ಮುದ್ರೆಗಳನ್ನು(impression) ಶಾರೀರಿಕವಾಗಿ ಇಲ್ಲಿ ಇಲ್ಲದಿದ್ದಾಗಲೂ ಬಿಟ್ಟು ಹೋಗಿರುತ್ತಾನೆ ಎಂದು ಗುರೂಜಿಯವರು ವಿವರಿಸಿದ್ದರು. ಈ ಭಾವನೆಗಳು ಮತ್ತು ಆಲೋಚನೆಗಳು ಚೈತನ್ಯ ಅಥವಾ ಕಂಪನಗಳ ರೂಪದಲ್ಲಿ ಇರುತ್ತವೆ. ಈ ಕಂಪನಗಳು ಅಥವಾ ಚೈತನ್ಯಗಳು ಆ ವ್ಯಕ್ತಿಯು ವಾಸವಾಗಿದ್ದ ಸ್ಥಳಗಳಲ್ಲಿ ಉಳಿದುಕೊಂಡಿರುತ್ತವೆ ಮತ್ತು ಕ್ರಮೇಣ ಅಲ್ಲಿಯ ಗೋಡೆಗಳಲ್ಲಿ ಮತ್ತು ಆ ಜಾಗದಲ್ಲಿರುವ ವಸ್ತುಗಳಲ್ಲಿ ಲೀನವಾಗುತ್ತವೆ. ಈ ಚೈತನ್ಯಗಳಿಗೆ ಬುದ್ಧಿವಂತಿಕೆ ಇರುತ್ತದೆ ಮತ್ತು ಅಲ್ಲೊಂದು ಕೇಂದ್ರ ಬಿಂದುವಿರುತ್ತದೆ. ಕೆಲವೊಂದು ಸಂದರ್ಭಗಳಲ್ಲಿ, ಈ ಚೈತನ್ಯಗಳ ಮೂಲವು (core) ಅದೇ ವ್ಯಕ್ತಿಯಾಗಿ ಪ್ರಕಟಗೊಳ್ಳಬಹುದು. ಹಾಗಾಗಿ, ಚೈತನ್ಯದ ಮೂಲವೇ ಆ ವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತದೆ. ಆ ವ್ಯಕ್ತಿಯು ಇಲ್ಲದೇ ಇದ್ದರೂ ಸಹ, ಕೆಲವರು ಆ ವ್ಯಕ್ತಿಯನ್ನು ನೋಡುತ್ತಾರೆ. ಅದು ಆ ವ್ಯಕ್ತಿಯಾಗಿರುವುದಿಲ್ಲ ಆದರೆ ಆ ವ್ಯಕ್ತಿಯ ಆಕಾರವನ್ನು ನೋಡುತ್ತೇವೆ ಎಂದು ಗುರೂಜಿಯವರು ಸ್ಪಷ್ಟವಾಗಿ ಹೇಳಿದ್ದಾರೆ. ಕೆಲವೊಮ್ಮೆ, ನಮ್ಮಲ್ಲಿರುವ ನೆನಪುಗಳು ಆಕಾರ ಪಡೆಯುತ್ತವೆ. ನಮ್ಮ ಮನಸ್ಸಿನಲ್ಲಿರುವ, ನಮ್ಮ ಸುಪ್ತಾವಸ್ಥೆಯ ಮನಸ್ಸಿನಲ್ಲಿರುವ ಒಂದು ವ್ಯಕ್ತಿಯ ನೆನಪುಗಳಿಂದ, ಕೆಲವೊಮ್ಮೆ ಕನಸು ಕಾಣುತ್ತೇವೆ ಮತ್ತು ನೆನಪುಗಳು ಆಕಾರವನ್ನು ಪಡೆಯುವುದರಿಂದ ಆ ವ್ಯಕ್ತಿಯ ಆಕಾರವನ್ನು ನಾವು ಕಾಣುತ್ತೇವೆ ಎಂದು ನನಗೆ ಅನಿಸುತ್ತದೆ. ಈ ಭೂಮಿಯ ಮೇಲೆ ಇಲ್ಲದ ಜನರಿಗೆ, ಈ ಲೋಕವನ್ನು ಬಿಟ್ಟು ಹೋದ ಜನರಿಗೆ, ಅವರಿಂದ ನಮಗೆ ದೊರೆಯುತ್ತಿರುವ ಸಂವಹನದ ಬಗ್ಗೆ ಅರಿವು ಇರುವುದಿಲ್ಲ ಎಂದು ಕೂಡ ಗುರೂಜಿಯವರು ಹೇಳಿದ್ದಾರೆ. ಈ ಸಂವಹನೆಯು ಈ ಚೈತನ್ಯದಿಂದ ಮಾತ್ರ ಬರುತ್ತಿರುತ್ತದೆ ಹಾಗೂ ಗತಿಸಿದ ಆತ್ಮಕ್ಕೆ ಇದರ ಅರಿವು ಇರುವುದಿಲ್ಲ.

ಎಷ್ಟು ಕಾಲ ಈ ಉಳಿಸಿ ಹೋದ ಮುದ್ರೆಗಳು ಹಾಗೆಯೇ ಉಳಿದಿರುತ್ತವೆ? ಕಟ್ಟಡಗಳು ಮತ್ತು ವಸ್ತುಗಳು ಉಳಿದಿರುವ ತನಕವೂ ಚೈತನ್ಯಗಳು ಮತ್ತು ಕಂಪನಗಳು ಉಳಿದಿರುತ್ತವೆ ಎಂದು ಗುರೂಜಿಯವರು ಹೇಳಿದ್ದಾರೆ. ಕಟ್ಟಡಗಳು ಮತ್ತು ವಸ್ತುಗಳು ನಾಶವಾದಾಗ, ಆ ಮುದ್ರೆಗಳು ಅವುಗಳಿಂದ ಹೊರಬರುತ್ತವೆ. ಆದರೂ, ಅವುಗಳು ನಾಶವಾಗಿರುವುದಿಲ್ಲ ಅಥವಾ ಅಳಿಸಿ ಹೋಗಿರುವುದಿಲ್ಲ. ಅವು ಬೇರೆ ಮಟ್ಟದಲ್ಲಿ ಉಳಿದುಕೊಳ್ಳುತ್ತವೆ, ಒಂದು ಸೂಕ್ಷ್ಮ ಮಟ್ಟದಲ್ಲಿ. ಆ ಚೈತನ್ಯಗಳು ಮುಂದುವರೆದು ಇನ್ನೂ ಸೂಕ್ಷ್ಮ ಮಟ್ಟಕ್ಕೆ ಸ್ಥಳಾಂತರಗೊಳ್ಳುತ್ತವೆ. ಒಂದು ಮಟ್ಟದಲ್ಲಿ, ಈ ಮನ್ವಂತರದ ಕೊನೆಯವರೆಗೂ, ಅವು ಆಕಾಶಿಕ್ ದಾಖಲೆಗಳಲ್ಲಿ ಶಾಶ್ವತವಾಗಿ ದಾಖಲಾಗಿರುತ್ತವೆ.

ಅತೀಂದ್ರಿಯ ಸಾಮರ್ಥ್ಯಗಳುಳ್ಳ ವ್ಯಕ್ತಿಯು ವಸ್ತುಗಳಲ್ಲಿರುವ ಮುದ್ರೆಗಳನ್ನು ಓದಬಲ್ಲನು. ಆದರೆ ಆಕಾಶಿಕ್ ದಾಖಲೆಗಳಲ್ಲಿರುವ ಮುದ್ರೆಗಳನ್ನು ಓದಲು ಕೇವಲ ಅತೀಂದ್ರಿಯ ಸಾಮರ್ಥ್ಯಗಳು ಸಾಕಾಗುವುದಿಲ್ಲ. ನಾನು ಮೊದಲೇ ಹೇಳಿದಂತೆ, ಕೇವಲ ಋಷಿಗಳು ಮಾತ್ರ ಆಕಾಶಿಕ್ ದಾಖಲೆಗಳನ್ನು ಓದಬಲ್ಲರು. ಈ ಎಲ್ಲಾ ವಿಷಯಗಳು ನಮ್ಮ "ಉನ್ನತ ಸಂಪರ್ಕಗಳು ಮತ್ತು ಇತರ ವಾಸ್ತವಗಳು" ಪುಸ್ತಕದಲ್ಲಿದೆ. ಬಹಳಷ್ಟು ಮಾಹಿತಿ ಆ ಪುಸ್ತಕದಲ್ಲಿದೆ.

ಆಕಾಶದಲ್ಲಿ, ಸಂಗ್ರಹಿಸಿದ ದಾಖಲೆಗಳ ವಿಶೇಷವಾದ ಕವಾಟಗಳಿವೆ. ಎಲ್ಲಾ ಭೂಮಿಗಳ, ನಕ್ಷತ್ರಗಳ, ಗ್ಯಾಲಕ್ಸಿಗಳ ಸಂಪೂರ್ಣ ಇತಿಹಾಸಗಳು ಮತ್ತು ಆ ಮೂಲಕ ಬ್ರಹ್ಮಾಂಡದ ವಸ್ತುಗಳ ಇತಿಹಾಸವನ್ನು ಪ್ರತ್ಯೇಕ ವಿಭಾಗಗಳಲ್ಲಿ ಸಂಗ್ರಹಿಸಿಡಲಾಗಿದೆ. ಒಂದು ಭೂಮಿ ನಾಶವಾದಾಗ, ಅದರ ದಾಖಲೆಗಳೂ ಅಳಿಸಿ ಹೋಗುತ್ತವೆ. ಸಂಪೂರ್ಣ ಸೃಷ್ಟಿಯನ್ನು ಹಿಂಪಡೆದಾಗ, ಎಲ್ಲಾ ಆಕಾಶಿಕ್ ದಾಖಲೆಗಳು ನಾಶವಾಗುತ್ತವೆ.

ಕಳೆದ ಬಾರಿ ನಮ್ಮೊಳಗೆ ಇರುವ ಭಗವಂತನ ಅಪ್ರಕಟಿತ ಭಾಗದ ಬಗ್ಗೆ ಮಾತನಾಡಿದ್ದೆ. ಅದರ ತಂತ್ರವನ್ನು ಮತ್ತೊಮ್ಮೆ ಹಂಚಿಕೊಳ್ಳಬೇಕೆಂಬ ವಿನಂತಿ ನನಗೆ ಬಂದಿತ್ತು. ನಾನು ತಂತ್ರವನ್ನು ಉಲ್ಲೇಖಿಸಿದ್ದೆ ಆದರೆ ಪ್ರಾಯಶಃ ಅದು ಸ್ಪಷ್ಟವಾಗಿರಲಿಲ್ಲವೆನಿಸುತ್ತದೆ. ವಾಸ್ತವವಾಗಿ ನಾವು ತಂತ್ರದ ಬಗ್ಗೆ ಚಿಂತಿಸುವ ಅಗತ್ಯವಿಲ್ಲವೆಂದು ಗುರೂಜಿಯವರು ಹೇಳಿದ್ದರು. ಚಿದಾಕಾಶ, ಭಗವಂತನ ಈ ಅಪ್ರಕಟಿತ ಭಾಗ, ಒಂದು ಚಿಕ್ಕ ಆಕಾಶ, ಮುಷ್ಟಿಯ ಗಾತ್ರದ್ದು, ನಮ್ಮ ಎದೆಯ ಮಧ್ಯ ಭಾಗದಲ್ಲಿ ಇದೆ ಎಂಬ ಅರಿವಿದ್ದರೆ ಅಷ್ಟೇ ಸಾಕು ಎಂದು ಅವರು ಹೇಳಿದ್ದರು. ಆದರೆ, ನೀವು ತಂತ್ರವನ್ನು ಅಭ್ಯಾಸ ಮಾಡಲು ಇಚ್ಛಿಸಿದರೆ, ಈ ತಂತ್ರವನ್ನು ಅಭ್ಯಾಸ ಮಾಡಿ. ಅದು ಹೀಗಿದೆ: ಒಂದು ಮುಷ್ಟಿ ಗಾತ್ರದ ಆಕಾಶವನ್ನು ನಮ್ಮ ಎದೆಯ ಮಧ್ಯ ಭಾಗದಲ್ಲಿರುವಂತೆ ಊಹೆ ಮಾಡಿಕೊಳ್ಳಬೇಕು. ನಾವು ಊಹೆ ಮಾಡಿಕೊಳ್ಳಬೇಕು ಮತ್ತು ಅದನ್ನು ಅನುಭವಿಸಲು ಪ್ರಯತ್ನ ಮಾಡಬೇಕು. ಮತ್ತು ಇದನ್ನು 3 ನಿಮಿಷಗಳಿಗಿಂತ ಹೆಚ್ಚು ಕಾಲ ಅಭ್ಯಾಸ ಮಾಡಬಾರದೆಂದು ಅವರು ನಮ್ಮನ್ನು ಎಚ್ಚರಿಸಿದ್ದಾರೆ. ■

## ಪ್ರಶ್ನೋತ್ತರಗಳು

ಜಯಂತ್ ದೇಶ್‌ಪಾಂಡೆ
ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ

**ಪ್ರ: ನಾನು ಪ್ರಾಮಾಣಿಕವಾಗಿ ತಂತ್ರವನ್ನು ಅಭ್ಯಾಸ ಮಾಡುತ್ತಿದ್ದರೂ ನನಗೆ ಬೆಳಕಿನ ಅನುಭವ ಪಡೆಯಲು ಸಾಧ್ಯವಾಗುತ್ತಿಲ್ಲ. ಬೆಳಕನ್ನು ಕಲ್ಪಿಸಿಕೊಂಡರೂ, ನನಗೆ ಬೆಳಕನ್ನು ನೋಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಏಕೆ?**

ಉ: ಮೊದಲಿಗೆ, ನಾವು ಬೆಳಕನ್ನು ನೋಡಲಾರೆವು, ಕಾರಣ ಅದು ಬಹಳ ಸೂಕ್ಷ್ಮಮಟ್ಟದ್ದಾಗಿದೆ. ನಮಗೆ ಬೆಳಕನ್ನು ಕಲ್ಪಿಸಿಕೊಳ್ಳುವುದಕ್ಕೆ ಹೇಳುತ್ತಾರೆ. ಬೆಳಕನ್ನು ಕಲ್ಪಿಸಿಕೊಳ್ಳುವುದೇ ಪ್ರಾರಂಭ. ನಂತರ ನಾವು ಬೆಳಕಿಗೆ ಶರಣಾಗಬೇಕು, ನಂತರ ಬೆಳಕೇ ಕೆಲಸ ನಿರ್ವಹಿಸುತ್ತದೆ. ಅದು, ಭೌತಿಕ ಬೆಳಕು ಅಲ್ಲದಿರುವುದರಿಂದಾಗಿ ನಾವು ಆ ಬೆಳಕನ್ನು ನೋಡಲಾರೆವು. ನಾವು ತಂತ್ರವನ್ನು ಅಭ್ಯಾಸ ಮಾಡುವಾಗ ಬೆಳಕಿನ ಬಗ್ಗೆ ಹೆಚ್ಚು ಪ್ರೀತಿಯನ್ನು ಹೊಂದಿರಬೇಕು. ಅದೊಂದು ವ್ಯಕ್ತಿತ್ವದಂತೆ. ಬೆಳಕೇ ದೇವರು. ಅವನ ಬಗ್ಗೆ ನಾವು ಸ್ವಲ್ಪ ಭಾವುಕರಾಗಿರಬೇಕು.

**ಪ್ರ: ನಮ್ಮ ಪ್ರೀತಿ ಪಾತ್ರರೊಂದಿಗೆ ಏಕತೆಯ ತಂತ್ರವನ್ನು ಅಭ್ಯಾಸ ಮಾಡಬಹುದೇ? ಈ ತಂತ್ರದಿಂದ ಪಡೆದುಕೊಂಡ ಪ್ರಯೋಜನವನ್ನು ಬೇರೆಯವರಿಗೂ ಹರಡಬಹುದೆ?**

ಉ: ಇದೊಂದು ಅದ್ಭುತ ವಿಚಾರ, ಮಹತ್ತರವಾದ ವಿಚಾರ. ಒಂದು ತಂತ್ರವನ್ನು ಅಭ್ಯಾಸ ಮಾಡಿದಾಗ, ಅದರಿಂದ ನಾವು ಪ್ರಯೋಜನವನ್ನು ಪಡೆದುಕೊಳ್ಳುತ್ತೇವೆ. ನಾವು ಪರಿವರ್ತನೆಗೊಂಡು ಹೆಚ್ಚು ಪ್ರೀತಿಯನ್ನು ಅಭಿವ್ಯಕ್ತ ಪಡಿಸುತ್ತೇವೆ. ನಮ್ಮಿಂದ ಹೆಚ್ಚು ಪ್ರೀತಿ, ಶಾಂತಿ ಹೊರಹೊಮ್ಮಿ, ನಮ್ಮ ಸುತ್ತಮುತ್ತಲಿನ ಜನರನ್ನು ತಲುಪಿ ಬೆಳಕು ಅವರಿಗೂ ಸಹಾಯ ಮಾಡುತ್ತದೆ. ಪರೋಕ್ಷವಾಗಿ ನಾವು ಅವರಿಗೂ ಸಹಾಯ ಮಾಡುತ್ತಿರುತ್ತೇವೆ. ಪ್ರತಿ ವ್ಯಕ್ತಿಯೂ ತನಗೆ ತಾನೇ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಬೇರೆಯವರಿಗೆ ಸಹಾಯ ಮಾಡಲು ಅತ್ಯುತ್ತಮ ಮಾರ್ಗವೆಂದರೆ, ನಾವು ಆಧ್ಯಾತ್ಮಿಕವಾಗಿ ಬೆಳೆಯುವುದು. ನಾವು ಅವರಿಗೆ ಬೆಳಕನ್ನು ಕೂಡ ಕಳಿಸಬಹುದು.

**ಪ್ರ: ನಾವು ಜೀವ ಶಕ್ತಿಯನ್ನು ಅಭಿವ್ಯಕ್ತಪಡಿಸುವುದು ಹೇಗೆ?**

ಉ: ಗುರೂಜಿಯವರು ವಿವರಿಸಿ ಹೇಳಿರುವಂತೆ, ಈ ಜೀವ ಶಕ್ತಿಯು ಮಹಾ ವಿಷ್ಣುವಿನಿಂದ ನಾವು ಪಡೆದುಕೊಳ್ಳುವ ವಿಶೇಷ ಚೈತನ್ಯ. ಗುರೂಜಿಯವರು ನಮಗೆ ತಿಳಿಸಿರುವಂತೆ, ಭೌತಿಕ ಬ್ರಹ್ಮಾಂಡವನ್ನು ಸೃಷ್ಟಿಸಿದ ನಂತರ, ಬೇರೆ ಬೇರೆ ದೈವೀ ಲೋಕಗಳಿಂದ ಚೈತನ್ಯಗಳನ್ನು ಕೆಳಗೆ ತರಲಾಯಿತು. ಅಂತಹ ಚೈತನ್ಯಗಳಲ್ಲಿ ಜೀವ ಶಕ್ತಿಯೂ ಒಂದು, ಇದು ಇಡೀ ಭೌತಿಕ ಬ್ರಹ್ಮಾಂಡದಲ್ಲಿ ಲಭ್ಯವಿದೆ. ಈ ಜೀವ ಶಕ್ತಿ ಎಲ್ಲೆಲ್ಲೂ ತುಂಬಿದೆ, ಜೀವರಾಶಿಗಳಿಲ್ಲದ ಸ್ಥಳಗಳಲ್ಲೂ ಇದೆ. ಈ ಜೀವ ಶಕ್ತಿ ನಮ್ಮ ಕನಸುಗಳಲ್ಲಿ ಇದೆ ಎಂದು ಗುರೂಜಿಯವರು ಹೇಳುತ್ತಿದ್ದರು. ನಾವು ಹೊತ್ತಿರುವ ಕನಸುಗಳು ಈ ಜೀವ ಶಕ್ತಿಯಿಂದಲೇ ಬರುತ್ತವೆ. ನಮ್ಮಲ್ಲಿರುವ ಜೀವ ಶಕ್ತಿಯನ್ನು ಅಭಿವ್ಯಕ್ತ ಪಡಿಸಬೇಕೆಂದು ಗುರೂಜಿಯವರು ಹೇಳುತ್ತಿದ್ದರು. ಈ ಜೀವನವನ್ನು ಸಂಭ್ರಮಿಸಬೇಕು. ನಾವು ಖುಷಿಯಾಗಿರಲು, ಸಂತೋಷದಿಂದಿರಲು ಮತ್ತು ಉಲ್ಲಾಸದಿಂದಿರಲು, ನಮ್ಮಲ್ಲಿರುವ ಈ ಜೀವ ಶಕ್ತಿಯೇ ಕಾರಣ, ಇದು ನಾವು ಸಂಭ್ರಮಿಸುವಂತೆ ಮಾಡುತ್ತದೆ. ಕೆಲವೊಂದು ವೇಳೆ ಈ ಜೀವ ಶಕ್ತಿ ಹಾಡನ್ನು ಗುನುಗುನಿಸುವಂತೆ ಅಥವಾ ನರ್ತಿಸುವಂತೆ ಪ್ರೇರೇಪಿಸುತ್ತದೆ. ಇವೆಲ್ಲವೂ ಜೀವ ಶಕ್ತಿಯಿಂದ ಬರುತ್ತವೆ. ನಾವು ಈ ಜೀವ ಶಕ್ತಿಯನ್ನು ಅದುಮಿಡಬಾರದೆಂದು ಗುರೂಜಿಯವರು ಹೇಳುತ್ತಿದ್ದರು. ನಮ್ಮಲ್ಲಿ ಈ ಜೀವ ಶಕ್ತಿ ಚಟುವಟಿಕೆಯಿಂದ ಇದ್ದರೆ, ಜೀವಂತವಾಗಿದ್ದೇವೆ ಎಂಬ ಭಾವನೆ ಮೂಡಿಸುತ್ತದೆ. ಹೆಚ್ಚು ಸಮಯ ಪ್ರಕೃತಿಯ ಜೊತೆಗೆ ಕಳೆದಾಗ, ಆಕಾಶ ವೀಕ್ಷಿಸಿದಾಗ, ಮಕ್ಕಳ ಜೊತೆ ಬೆರೆತಾಗ, ನಾವು ಹೆಚ್ಚು ಜೀವ ಶಕ್ತಿಯನ್ನು ಪಡೆದುಕೊಳ್ಳುತ್ತೇವೆ. ಸ್ವಲ್ಪ ತುಂಟತನದಿಂದ ಇರುವುದು ಸಹ ಜೀವ ಶಕ್ತಿಯನ್ನು ಅಭಿವ್ಯಕ್ತಿಸುವುದೇ ಆಗಿದೆ. ಒಂದಿಷ್ಟು ತುಂಟುತನವೂ ಸಹ ನಮ್ಮ ಜೀವನವನ್ನು ವರ್ಣಮಯವನ್ನಾಗಿಸುತ್ತದೆ. ಇದರಿಂದ ನಮ್ಮ ಜೀವನ ಚೇತೋಹಾರಿ ಆಗಿರುತ್ತದೆ. ಜೀವನ ಬೇಸರವೆನಿಸುವುದಿಲ್ಲ, ಅಥವಾ ನೀರಸವೆನಿಸುವುದಿಲ್ಲ. ನಮ್ಮ ಸೋಲುಗಳು ನಮ್ಮನ್ನು ಎದೆಗುಂದಿಸುವುದಿಲ್ಲ. ಮತ್ತು ನಮ್ಮ ಗುರಿಗಳನ್ನು ಮುಟ್ಟುವ ತನಕ ಪ್ರಯತ್ನಗಳನ್ನು ಮುಂದುವರಿಸುವಂತೆ ಮಾಡುತ್ತದೆ ಈ ಜೀವ ಶಕ್ತಿ. ಯಾವಾಗಲೂ ಆಶಾ ಭಾವದಿಂದಿರುವುದು, ಸಕ್ರಿಯ ಮತ್ತು ಕ್ರಿಯಾತ್ಮಕವಾಗಿರುವುದು ಈ ಜೀವ ಶಕ್ತಿಯಿಂದ ಬರುತ್ತದೆ. ಜಡತ್ವದಿಂದ ಜೀವಿಸುವುದು, ಜೀವ ಶಕ್ತಿಯನ್ನು ಅಭಿವ್ಯಕ್ತಿಸುವುದಕ್ಕೆ ವಿರುದ್ಧ.

**ಪ್ರ: ನಾವು ಹೇಗೆ ಅಪ್ರೀತಿಯಿಂದ ಹೊರಬರಬಹುದು?**

ಉ: ನಮಗೆ ನಾವೇ ನಮ್ಮಲ್ಲಿ ಪ್ರೀತಿಯನ್ನು ತುಂಬಿಸಿಕೊಳ್ಳುವುದರ ಮೂಲಕ, ಮತ್ತು ಪ್ರೀತಿಯನ್ನು ಅಭಿವ್ಯಕ್ತ ಪಡಿಸುವುದರ ಮೂಲಕ ನಾವು ಅಪ್ರೀತಿಯಿಂದ ಹೊರಗೆ ಬರಬಹುದು. ನಮ್ಮಲ್ಲಿ ಪ್ರೀತಿ ಇದ್ದಾಗ, ಮತ್ತು ನಾವು ಪ್ರೀತಿಯನ್ನು ಅಭಿವ್ಯಕ್ತಪಡಿಸಿದಾಗ ನಮ್ಮಲ್ಲಿ ಅಪ್ರೀತಿಗೆ ಸ್ಥಳವೇ ಇರುವುದಿಲ್ಲ.

**ಪ್ರ: ನಾನು ನಿರಂತರವಾಗಿ ಧ್ಯಾನ ಮಾಡುತ್ತೇನೆ. ಆದರೆ ಕೆಲವು ಸಲ ಬೆಳಿಗ್ಗೆ ಎದ್ದ ನಂತರ, ದಿನ ಪೂರ್ತಿ ನಿತ್ರಾಣದಿಂದ ಬಳಲಿದಂತೆ ಇರುತ್ತೇನೆ. ನನಗೆ ಯಾವುದೇ ಕೆಲಸವನ್ನು ಸರಿಯಾಗಿ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ.**


ಉ: ನಿತ್ರಾಣ ಅಥವಾ ಬಳಲಿಕೆ ಇದು ಯಾವುದೂ ಧ್ಯಾನಕ್ಕೆ ಸಂಬಂಧಿಸಿದ್ದು ಅಲ್ಲ. ಬಹುಶಃ ದೈಹಿಕ ಕಾರಣದಿಂದ ಇರಬಹುದು, ಆರೋಗ್ಯಕ್ಕೆ ಸಂಬಂಧಪಟ್ಟಿದ್ದಾಗಿರಬಹುದು. ನೀವು ವೈದ್ಯರನ್ನು ಸಂಪರ್ಕಿಸಬೇಕು. ■



## ನಮ್ಮ ಪ್ರಕಟಣೆಗಳು

| | | |
|---|---|---|
| Doorways to Light | | 200/- |
| New Age Realities | | 200/- |
| Higher Communication & Other Realities | | 100/- |
| Light Body & Other Realities | | 100/- |
| Master-Pupil Talks | | 60/- |
| Master-Pupil Talks - Vol 2 | | 75/- |
| iGuruji Vol 1,3,4 & 7 | | each 150/- |
| iGuruji - Vol 2 | 120/- | |
| iGuruji - Vol 5 | | 100/- |
| iGuruji - Vol 6 | 75/- | |
| Living in the Light of My Guru | | 220/- |
| How to Meditate | | 50/- |
| Dhyana Yoga | | 50/- |
| Descent of Soul | | 50/- |
| Practising Shambala Principles | | 50/- |
| Astral Ventures of A Modern Rishi | | 50/- |
| Channelled Knowledge from the Rishis-Vol 2 | | 150/- |
| Channelled Knowledge from the Rishis-Vol 3 & 4 | | each 200/- |
| Guruji Speaks Part - I & II | | each 200/- |
| Guruji Speaks (Vol 3) | | 150/- |
| Guruji Speaks (Vol 4) | | 250/- |
| Guruji Speaks (Vol 5 & 7) | | each 200/- |
| The Book of Reflections - Vol 1 & 2 | | each 200/- |
| The Book of Reflections - Vol 3 | | 150/- |
| Meditators on Meditations | | 75/- |
| Meditators on Experiences | | 75/- |
| Meditational Experiences - Vol 1 & 2 | | each 150/- |
| Awareness | | 60/- |
| Living in Light | | 10/- |
| Light | | 10/- |
| Quotes from the Rishis - Vol 1 & 2 | | each 100/- |
| Pyramid Revelations | | 100/- |
| Thus Spoke Guruji Krishnananda - Vol 1 & 4 | | each 200/- |
| Thus Spoke Guruji Krishnananda - Vol 2 & 3 | | each 250/- |
| ಬೆಳಕಿಗೆ ಬಾಗಿಲುಗಳು | | 150/- |
| ಋಷಿಗಳಿಂದ ಬಂದ ಜ್ಞಾನ | | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | | 150/- |
| ಗುರು–ಶಿಷ್ಯರ ಸಂಭಾಷಣೆ | | 60/- |
| ಐ–ಗುರೂಜಿ ಭಾಗ 1 | | 150/- |
| ಐ–ಗುರೂಜಿ ಭಾಗ 2 | | 120/- |
| ಹೊಸ ಯುಗದ ವಾಸ್ತವಗಳು | | 120/- |
| ಉನ್ನತ ಸಂಪರ್ಕಗಳು | | 100/- |
| ಅನಿಸಿಕೆಗಳು | | 120/- |
| ಧ್ಯಾನ ಮಾಡುವುದು ಹೇಗೆ | | 50/- |
| ಧ್ಯಾನ ಯೋಗ | | 50/- |
| ಆತ್ಮದ ಅವರೋಹಣ | | 50/- |
| ಶಂಬಲ ನಿಯಮಗಳ ಅಭ್ಯಾಸ | | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | | 50/- |
| ಗುರೂಜಿ ನಾ ಕಂಡಂತೆ | | 30/- |
| ಬೆಳಕಿನಲ್ಲಿ ಬದುಕುವುದು | | 10/- |
| ಬೆಳಕು | | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | | 100/- |
| प्रकाशवाट (Marathi) | | 150/- |
| आयगुरूजी (Marathi) | | 100/- |
| ध्यान कसे करावे (Marathi) | | 50/- |
| ध्यानयोग (Marathi) | | 50/- |
| आत्म्याचे पृथ्वीवर अवतरण (Marathi) | | 50/- |
| शंबला तत्त्वांचा अभ्यास (Marathi) | | 50/- |
| एका आधुनिक ऋषीचे सूक्ष्मजगातील पराक्रम (Marathi) | | 50/- |
| प्रकाशमय जीवन (Marathi) | | 10/- |
| प्रकाश (Marathi) | | 10/- |
| उच्चस्तरीय संवाद आणि इतर सत्ये (Marathi) | | 100/- |
| गुरु–शिष्य संवाद (Marathi) | | 60/- |
| ध्यान कैसे करे (Hindi) | | 50/- |
| ध्यान-योग (Hindi) | | 50/- |
| प्रकाश (Hindi) | | 10/- |
| प्रकाशमय जीवन (Hindi) | | 10/- |
| प्रकाश की ओर (Hindi) | | 150/- |
| आत्मा का अवतरण (Hindi) | | 50/- |
| தியானம் செய்வது எப்படி | | 50/- |
| ஒளியின் வாயில்கள் | | 200/- |
| தியான யோகம் | | 50/- |
| ஆத்மாவின் அவரோகணம் | | 50/- |
| நவீன ரிஷி ஒருவரின் சூக்ஷ்ம சாகசங்கள் | | 50/- |
| சம்பலா நியமங்களின் அப்பியாசங்கள் | | 50/- |
| ధ్యానం చేయ్యడం ఎలా | | 50/- |
| కాంతికి ద్వారములు | | 100/- |

Published: 21st of Every Month. RNI. No. KARKAN/2003/13739 Regd. Postal Regn. No. KRNA/BGE/1124/ 2020-2022
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ತಪೋನಗರ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ. ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಹಲ್ಲಿನ ಚಿಕಿತ್ಸೆ ಮಾಡಿಸಿಕೊಳ್ಳುವುದೆಂದರೆ ನನಗೆ ಅತೀವ ಭಯ. ಹಲ್ಲಿನ ತೊಂದರೆ ತಡೆಯಲಾರದಷ್ಟಾಗುವವರೆಗೂ ನಾನು ದಂತ ವೈದ್ಯರ ಬಳಿಗೆ ಹೋಗುವುದನ್ನು ತಪ್ಪಿಸುತ್ತೇನೆ. ಹಲ್ಲಿನ ನೋವು ವಿಪರೀತವಾಗಿ ಊತ ಕಾಣಿಸಿಕೊಂಡದ್ದರಿಂದ ಅನಿವಾರ್ಯವಾಗಿ ಚಿಕಿತ್ಸೆಗೆ ಹೋಗಲೇ ಬೇಕಾಯಿತು. ಕುರ್ಚಿಯಲ್ಲಿ ಕುಳಿತ ಮೇಲೆ ಅಲ್ಲಿದ್ದ ಎಲ್ಲ ರೀತಿಯ ಉಪಕರಣಗಳನ್ನು ನೋಡಿ ಭಯ ಶುರುವಾಯಿತು. ನನ್ನಲ್ಲಿ ಉಂಟಾದ ಭಯ ನನ್ನ ಅರಿವಿಗೆ ಬಂದಿತು. ಚಿಕಿತ್ಸೆ ಮುಂದುವರಿಯುತ್ತಿದ್ದಂತೆ ನಾನು ಹೆಚ್ಚು ಭಯಗ್ರಸ್ಥಳಾದೆ. ನನಗೆ ಉಸಿರಾಡಲೂ ಆಗುವುದಿಲ್ಲವೇನೋ ಅಂದುಕೊಂಡೆ. ತಕ್ಷಣ ನಾನು ಬೆಳಕಿಗೆ ಸಂಪರ್ಕಗೊಂಡೆ. ಚಿಕಿತ್ಸೆ ಮುಗಿಯುವವರೆಗೂ ಶಾಂತವಾಗಿ ಕುಳಿತುಕೊಳ್ಳಲು ಸಾಧ್ಯವಾಯಿತು. ನನಗಿದು ಮಹತ್ತರ ಸಾಧನೆಯೇ ಹೌದು. ನನಗೆ ತುಂಬಾ ಸಂತೋಷವಾಯಿತು ಮತ್ತು ಬೆಳಕಿಗೆ ನನ್ನ ವಂದನೆಗಳು.

ನಾನು ಉಪಾಧ್ಯಾಯಿನಿ, ನನ್ನ ಕ್ಷೇತ್ರದಲ್ಲಿ ಹೆಚ್ಚು ಕ್ರಿಯಾಶೀಲಳಾಗಿದ್ದೇನೆ. ವಿದ್ಯಾರ್ಥಿಗಳೊಂದಿಗೆ ಸಹ ನನ್ನ ಸಂಬಂಧ ಅತ್ಯುತ್ತಮವಾಗಿದೆ.

ನನಗೆ ಅನೇಕ ವಿಷಯಗಳನ್ನು ತೋರಿಸಲೆಂದೇ ಈ ವರ್ಷ ಬಂದಿದೆ – ನನ್ನ ಕೊರತೆಗಳನ್ನು ಕಂಡುಕೊಳ್ಳುವುದು, ಸಮಾಜದ, ದೇಶದ ಹಾಗೂ ಪ್ರಪಂಚದ ಕುಂದುಕೊರತೆಗಳನ್ನು ಮತ್ತು ವೈಫಲ್ಯಗಳನ್ನು ಕಾಣುವುದು. ಈ ವಿಷಯಗಳ ಮೇಲೆ ಕೆಲಸಮಾಡಲು ಮತ್ತು ನನ್ನ ಸುತ್ತಮುತ್ತಲಿನ ಎಲ್ಲರ ಮೇಲೆ ಆಳವಾದ ಪ್ರೀತಿ ಮತ್ತು ಕರುಣೆಯನ್ನು ಅಭಿವ್ಯಕ್ತಿಸಲು, ಇದು ಅವಕಾಶ ಮಾಡಿಕೊಟ್ಟಿತು. ನಾನು ಭಗವಂತನಿಗೆ, ಋಷಿಗಳಿಗೆ, ಗುರೂಜಿಯವರಿಗೆ, ಅವರಿಂದ ಪಡೆದ ಪ್ರೀತಿ ಹಾಗೂ ಮಾರ್ಗದರ್ಶನಕ್ಕಾಗಿ ಅತ್ಯಂತ ಕೃತಜ್ಞಳಾಗಿದ್ದೇನೆ.

– ಪ್ರಿಯಂವದಾ ಗೋಡ್ಸೆ

ನನಗೆ ಕಚೇರಿಯ ಕೆಲಸದ ಒತ್ತಡ ಬಹಳವಾಗಿದೆ. ಆದರೂ, ಧ್ಯಾನ ಮಾಡಿದ ನಂತರ ನನ್ನ ದಿನನಿತ್ಯದ ಕೆಲಸಗಳನ್ನು ಸಲೀಸಾಗಿ ಮಾಡಲು ಸಾಧ್ಯವಾಗುತ್ತಿದೆ. ಖಂಡಿತವಾಗಿಯೂ ಋಷಿಗಳು, ನಮ್ಮ ಬದುಕಿನ ಪ್ರಾಪಂಚಿಕ ಮತ್ತು ಆಧ್ಯಾತ್ಮಿಕ ವಿಷಯಗಳನ್ನು ಗಮನಿಸುತ್ತಾ ನಮ್ಮನ್ನು ಮೇಲೆತ್ತುತ್ತಿರುವರು. ಈ ಸಪ್ತರ್ಷಿ ಧ್ಯಾನಕ್ಕೆ ಸೇರಿದ ನಂತರ ನಿಧಾನವಾಗಿ ಬದಲಾಗಿದ್ದೇನೆ. ನನ್ನಲ್ಲಿ ಸಕಾರಾತ್ಮಕ ಚೈತನ್ಯಗಳು ತುಂಬಿವೆ. ಈ ಮಾರ್ಗದಲ್ಲಿರುವುದು ನನ್ನ ಅದೃಷ್ಟ. 2021ರ ಕ್ಯಾಲಂಡರ್ ಪಡೆದ ನಂತರ, ಬೆಳಕನ್ನು ಹೆಚ್ಚು ಸಮಯ ಚಾನಲ್ ಮಾಡಲು ಸಾಧ್ಯವಾಗುತ್ತಿದೆ. ಚೈತನ್ಯಯುತ ಶಕ್ತಿಯ ಅರಿವಾಗುತ್ತಿದೆ. ಅದಕ್ಕಾಗಿ ನನ್ನ ಸಂತೋಷವನ್ನು ವ್ಯಕ್ತಪಡಿಸಲು ಬಯಸುತ್ತೇನೆ.

– ಲಾವಣ್ಯ ಬಿ.

## ಫಾರಂ 4 (ರೂಲ್ 8)ರಂತೆ

"ತಪೋವಾಣಿ" ಕನ್ನಡ ವಾರ್ತಾಪತ್ರದ ಮಾಲೀಕತ್ವ ಮತ್ತು ಇತರ ವಿವರಗಳು

| | |
|---|---|
| 1. ಪತ್ರಿಕೆಯ ಹೆಸರು | ತಪೋವಾಣಿ |
| 2. ರಿಜಿಸ್ಟ್ರೇಷನ್ ನಂಬರ್ | KARKAN/2003/13739 |
| 3. ಪ್ರಕಟಣೆಯ ಸ್ಥಳ | ಬೆಂಗಳೂರು |
| 4. ಪ್ರಕಟಣೆಯ ಅವಧಿ | ತಿಂಗಳಿಗೊಮ್ಮೆ |
| 5. ಮುದ್ರಕರು, ಪ್ರಕಾಶಕರು ಮತ್ತು | |
| ಸಂಪಾದಕರ ಹೆಸರು | ಶ್ಯಾಮಲಾದೇವಿ |
| ರಾಷ್ಟ್ರೀಯತೆ | ಭಾರತೀಯರು |
| ವಿಳಾಸ | ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್– 560077 |
| 6. ಮುದ್ರಣವಾಗುವ ಸ್ಥಳ | ಆರ್ಟ್ ಪ್ರಿಂಟ್, 719/A, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. |
| 7. ಮಾಲೀಕರ ಹೆಸರು | ಮಾನಸ ಫೌಂಡೇಶನ್(ರಿ) |

ನಾನು, ಶ್ಯಾಮಲಾದೇವಿ, ಈ ಮೂಲಕ ತಿಳಿಸುವುದೇನೆಂದರೆ, ಮೇಲ್ಕಂಡ ವಿವರಗಳು ನನ್ನ ತಿಳಿವಳಿಕೆ, ನನ್ನ ನಂಬಿಕೆ ಪ್ರಕಾರ ಸಂಪೂರ್ಣ ಸತ್ಯವಾಗಿವೆ.

ಸಹಿ

ಬೆಂಗಳೂರು
ಶ್ಯಾಮಲಾದೇವಿ
ತಾ: 25–2–2021
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ